ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ), ಬೆಂಗಳೂರು ಪ್ರಕಟಣೆ

SHETTIGARA VAANI

ಕನ್ನಡ ಮಾಸಿಕ

# ಶೆಟ್ಟಿಗಾರ ವಾಣಿ

ಬೆಂಗಳೂರು ನಿವಾಸಿ ಕರಾವಳಿ ಮೂಲದ ಶೆಟ್ಟಿಗಾರ ಸಮಾಜದ ಮುಖವಾಣಿ

ಸಂಪುಟ: 1 | ಜನವರಿ 2025 | ಸಂಚಿಕೆ: 7 | ಪುಟಗಳು: 12

**ಸಂಪಾದಕ ಮಂಡಳಿ**

ಶ್ರೀ ನಾರಾಯಣ ಶೆಟ್ಟಿಗಾರ್
ಶ್ರೀ ಮಾಧವ ಶೆಟ್ಟಿಗಾರ್, ಯು
ಶ್ರೀ ಪ್ರಕಾಶಚಂದ್ರ, ಆತ್ರಾಡಿ
ಶ್ರೀ ಪ್ರಭಾಕರ ಶೆಟ್ಟಿಗಾರ್, ಎಂ
ಶ್ರೀ ಮಾಧವ ಶೆಟ್ಟಿಗಾರ್, ಶೆಟ್ಟಿಗಾಡು
ಶ್ರೀ ಸುಂದರ ಎಸ್ ಶೆಟ್ಟಿಗಾರ್, ಎಕ್ಕಾರ್
ಶ್ರೀ ದೊಂಬಯ್ಯ ಶೆಟ್ಟಿಗಾರ್
ಶ್ರೀಮತಿ ಬಾನುಮತಿ ಡಿ ಶೆಟ್ಟಿಗಾರ್
ಸಿ.ಎ. ವಿಶ್ರಾಂತ್ ಬಿ ಎಲ್
ಶ್ರೀ ಯತೀಶ್ ಎಲ್. ಶೆಟ್ಟಿಗಾರ್
ಶ್ರೀಮತಿ ಉಷಾ ಚೇತನ್

**ವಿನ್ಯಾಸ ಮತ್ತು ತಂತ್ರಜ್ಞಾನ ನೆರವು**

ಶ್ರೀ ಯಶಸ್ವಿ ಜೆ
ಶ್ರೀ ರಾಮಕೃಷ್ಣ ಸಾಲಿಕೇರಿ

**ವಿಳಾಸ**

ಶೆಟ್ಟಿಗಾರವಾಣಿ, C/o ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ), ನಂ.8,
ಶಾಂತವೇರಿ ಗೋಪಾಲಗೌಡ ನಗರ,
4ನೇ ಅಡ್ಡ ರಸ್ತೆ, ಮೂಡಲಪಾಳ್ಯ, ಬೆಂಗಳೂರು-560072

ಮೊಬೈಲ್: 9535443311
ಇಮೇಲ್: dkpadmashalibng@gmail.com
ವೆಬ್ ಸೈಟ್: www.dkpadmashalibng.in

ಸೂಚನೆ: ಇಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಆಯಾ ಲೇಖಕರ ವೈಯಕ್ತಿಕ ಅಭಿಪ್ರಾಯಗಳು ಮಾತ್ರ; ಪತ್ರಿಕೆಯ ಅಥವಾ ಕೂಟದ ಅಭಿಪ್ರಾಯಗಳಲ್ಲ.



AI generated image: No photo credits required

## ಧರ್ಮಶಾಸ್ತನ ಆರು ದೇಗುಲಗಳು ಮತ್ತು ಪಂಪಾಸ್ನಾನಂ ಪರಮ ಪವಿತ್ರಂ

**ಧರ್ಮಶಾಸ್ತನ ಆರು ದೇಗುಲಗಳು**

ಡಿಸೆಂಬರ್ ತಿಂಗಳು ಬಂತೆಂದರೆ ಅಯ್ಯಪ್ಪನ ಮಾಲಾಧಾರಿಗಳ "ಸ್ವಾಮಿಯೇ ಶರಣಂ ಅಯ್ಯಪ್ಪ" ಎಂಬ ಶರಣು ಘೋಷ ನಮ್ಮೆಲ್ಲರನ್ನು ಭಕ್ತಿ ಪರವಶಗೊಳಿಸುತ್ತದೆ. ನಮಗೂ ಅವರ ಜೊತೆ ಸೇರಿ ಶರಣು ಕರೆಯಬೇಕೆನಿಸುತ್ತದೆ. ಮಾಲೆ ಹಾಕಬೇಕೆನ್ನಿಸುತ್ತದೆ. ಆದರೆ ಶಬರಿಮಲೆಗೆ ಹೋಗುವುದು ಸುಲಭವಿಲ್ಲ. ಯಾಕೆಂದರೆ ಪೊನ್ನಂಬಲಕ್ಕೆ ಹೋಗುವುದಕ್ಕೆ ಕಠಿಣ ವೃತನಿಮಯಗಳ ಪಾಲನೆಯಿದೆ. ಅದಕ್ಕಾಗಿ ಒಂದು ಮಂಡಲ ಪರ್ಯಂತ (ಒಂದು ಮಂಡಲ ಎಂದರೆ 40 ರಿಂದ 48 ದಿನಗಳು. ಕೆಲವೆಡೆಯಲ್ಲಿ 41 ದಿನಗಳು. ಇನ್ನು ಕೆಲವೆಡೆ 48 ದಿವಸಗಳಿಗೆ ಒಂದು ಮಂಡಲವೆನ್ನುತ್ತಾರೆ) ವೃತನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ತನುಮನವನ್ನು ಪಯಣಕ್ಕೆ ಸಿದ್ಧಗೊಳಿಸಿ, ಪರಿಪೂರ್ಣವಾದ ಬ್ರಹ್ಮಚರ್ಯವನ್ನು ಪಾಲಿಸಿ, ಸಾತ್ವಿಕವಾಗಿ, ನಿಯಮಿತ ಆಹಾರ ಸೇವನೆ ಮಾಡುತ್ತಾ, ಎಲ್ಲ ಇಂದ್ರಿಯಗಳ ಮೇಲೆ ಸಂಪೂರ್ಣ ನಿಯಂತ್ರಣವನ್ನು ಸಾಧಿಸಿ, ತನ್ನಲ್ಲಿ ಅಯ್ಯಪ್ಪನನ್ನು ಕಂಡುಕೊಂಡರೆ ಮಾತ್ರ ಆಜ್ಞಾಚಕ್ರವು ಜಾಗೃತವಾಗಿರುವ, ಶಬರಿಗಿರಿಯ ಅಯ್ಯಪ್ಪನ ನಿಜದರ್ಶನದ ಯೋಗ ಲಭಿಸುವುದು. ಇದೇ ಕಾರಣಕ್ಕೆ ಋತುಸ್ರಾವವಾಗುವ ಮಹಿಳೆಯರು ಶಬರಿಮಲೆ ಯಾತ್ರೆಗೆ ಹೋಗುವುದಿಲ್ಲ. (ಸಂಶೋಧಕಿಯಾಗಿರುವ ಕೇರಳದ ಶೀನೂ ಜೋಸೆಫ್ ಎಂಬವರು "ವುಮೆನ್ & ಶಬರಿಮಲೆ" ಎಂಬ ತಮ್ಮ ಪುಸ್ತಕದಲ್ಲಿ ಧರ್ಮಶಾಸ್ತನ ಆರು ದೇವಸ್ಥಾನಗಳು ಹಾಗೂ ಕುಂಡಲಿನಿಯ ಷಡ್ಚಕ್ರಗಳು ಎಂಬ ವಿಷಯದ ಬಗ್ಗೆ ವಿಸ್ತಾರವಾಗಿ ವಿವರಿಸಿದ್ದಾರೆ. ಈ ಲೇಖನದಲ್ಲಿ ಅವರ ಪುಸ್ತಕದಿಂದ ಆಯ್ದ ಕೆಲ ಅಂಶಗಳನ್ನು ನಾನು ಕೃತಜ್ಞತಾಪೂರ್ವಕವಾಗಿ ಉಲ್ಲೇಖಿಸಿದ್ದೇನೆ).

ಶಬರಿಮಲೆ ಸಮೇತ ಒಟ್ಟು ಆರು ಧರ್ಮಶಾಸ್ತನ ದೇವಸ್ಥಾನಗಳಿವೆ. ಮಹಾವಿಷ್ಣುವಿನ ಆರನೇ ಅವತಾರವಾದ ಪರಶುರಾಮರು ಇವುಗಳನ್ನು ಸ್ಥಾಪಿಸಿದ್ದಾರೆ. ಇವುಗಳಲ್ಲಿ ಒಂದು ತಮಿಳುನಾಡಿನಲ್ಲಿದೆ. ಉಳಿದೆಲ್ಲ ಇರುವುದು ದೇವರ ನಾಡಾದ ಕೇರಳದಲ್ಲಿ. ಇವುಗಳನ್ನು ಒಂದು ನಿರ್ದಿಷ್ಟಪ್ರಕಾರ ದರ್ಶನ ಮಾಡಬೇಕು ಎನ್ನುವ ನಂಬಿಕೆಯಿದೆ. ಇದರ ಹಿಂದೆ ಆಧ್ಯಾತ್ಮಿಕ ಅರ್ಥವೂ ಇದೆ. ಹಿಂದಿನ ಕಾಲದಲ್ಲಿ ಪ್ರಾಜ್ಞರು ಹಾಗೂ ಯೋಗಿಗಳು ನಮ್ಮೆಲ್ಲ ದೇಗುಲಗಳು ನಮ್ಮ ಸೂಕ್ಷ್ಮ ದೇಹದಲ್ಲಿ ಒಂದು ನಿರ್ದಿಷ್ಟವಾದ ಚಕ್ರವನ್ನು ಪ್ರಚೋದಿಸುತ್ತದೆ ಎಂಬ ಸತ್ಯವನ್ನು ಕಂಡುಕೊಂಡಿದ್ದರು. ಅದೇ ಪ್ರಕಾರವಾಗಿ ಧರ್ಮಶಾಸ್ತನ ಆರು ದೇಗುಲಗಳು ನಮ್ಮ ದೇಹದ ಆರು ಬೇರೆ ಬೇರೆ ಚಕ್ರಗಳನ್ನು, ಅಂದರೆ ಷಡ್ಚಕ್ರಗಳನ್ನು ಜಾಗೃತಗೊಳಿಸುತ್ತವೆ. ಶಬರಿಮಲೆಗೆ ಹೋಗುವವರು ಈ ಎಲ್ಲ ದೇಗುಲಗಳಿಗೆ ಅದೇ ಕ್ರಮವಾಗಿ ಹೋದರೆ ಮಾತ್ರ ಅಯ್ಯಪ್ಪನ ಪೂರ್ಣಾನುಗ್ರಹಕ್ಕೆ ಪಾತ್ರರಾಗುತ್ತಾರೆ ಎಂಬ ನಂಬಿಕೆಯಿದೆ. ಶಬರಿಮಲೆ ಹೊರತು ಪಡಿಸಿ ಇಲ್ಲೆಲ್ಲ ಸರ್ವರಿಗೂ ಮುಕ್ತ ಪ್ರವೇಶವಿದೆ. ಅವುಗಳ ಸ್ಥೂಲ ಪರಿಚಯ ಇಲ್ಲಿದೆ:

**೧. ಸೋರಿ ಮುತ್ತೈಯ್ಯನ್ ದೇವಸ್ಥಾನ:** ಇಲ್ಲಿ ಶುದ್ಧ ಅಂತಃಕರಣದಿಂದ ದೇವರ ದರ್ಶನ ಮಾಡಿದರೆ ಮೂಲಾಧಾರ ಚಕ್ರವು ಜಾಗೃತವಾಗುತ್ತದೆ. ಇದು ಇರುವುದು ತಮಿಳುನಾಡಿನ ತಿರುನೆಲ್‌ವೇಲಿ ಜಿಲ್ಲೆಯ ಕಾಯರಾರ್ ಅಣೆಕಟ್ಟಿನ ಮೇಲೆ ಇರುವ ಕಡಿದಾದ ಬೆಟ್ಟದಲ್ಲಿ. ಇಲ್ಲಿ ಧರ್ಮಶಾಸ್ತನು ಆದಿ ಭೂತನಾಥನಾಗಿ ಅಗಸ್ತ್ಯನಿಗೆ ತನ್ನ ದಿವ್ಯದರ್ಶನವನ್ನು ನೀಡಿದಾಗ ದೇವತೆಗಳು ಹೊನ್ನಿನ ಹೂಮಳೆ ಸುರಿಸಿದರಂತೆ. ಹಾಗಾಗಿ ದೇವರಿಗೆ "ಪೊನ್ ಸೋರಿಯಮ್ ಮುತ್ತೈಯ್ಯನ್" ಎಂದು ಕರೆದರು. ಶಬರಿಮಲೆಗೆ ಹೋಗುವವರು ಇಲ್ಲಿ ಮಾಲಾಧಾರಣೆ ಮಾಡಿ ಹೊರಡುವ ವಾಡಿಕೆಯಿದೆ. ಇಲ್ಲಿ ಧರ್ಮಶಾಸ್ತನಿಗೆ ಪೂರ್ಣಕಲಾ ಮತ್ತು ಪುಷ್ಕಲಾ ಎಂಬ ಇಬ್ಬರು ಮಡದಿಯರಿದ್ದಾರೆ. ಇವರು ಜ್ಞಾನ ಮತ್ತು ಭಕ್ತಿಯ ಸಂಕೇತಗಳು.

**೨. ಅಚ್ಚನ್ ಕೋವಿಲ್ ಧರ್ಮಶಾಸ್ತ ದೇವಸ್ಥಾನ:** ತಮಿಳುನಾಡಿನ ಮೂಲಕ ಇಲ್ಲಿಗೆ ಪ್ರವೇಶಿಸಬೇಕಾದರೂ ಇದು ಇರುವುದು ಕೇರಳದ ಕೊಲ್ಲಂ ಜಿಲ್ಲೆಯಂಚಿನ ದಟ್ಟ ಅರಣ್ಯದ ಮಧ್ಯೆ. ಇಲ್ಲಿ ಧರ್ಮಶಾಸ್ತನು ಯುವರಾಜನಾಗಿ ಪೂರ್ಣಕಲಾ ಮತ್ತು ಪುಷ್ಪಕಲಾ ಎಂಬ ಪತ್ನಿಯರ ಜೊತೆಗೆ ಗ್ರಹಸ್ಥನಾಗಿದ್ದಾನೆ. ಪರಶುರಾಮರು ಸ್ಥಾಪಿಸಿದ ಪಂಚಲೋಹದ ಮೂಲ ವಿಗ್ರಹವಿರುವುದು ಇದೊಂದೇ ಸ್ಥಳದಲ್ಲಿ. ಧರ್ಮಶಾಸ್ತನ ವಿಗ್ರಹಕ್ಕೆ ಅಭಿಷೇಕಗೊಂಡ ನೀರು ಹಾಗೂ ಚಂದನ ಮಿಶ್ರಿತ ತೀರ್ಥಕ್ಕೆ ವಿಷಸರ್ಪಗಳ ಕಡಿತದಿಂದಾದ ವಿಷವನ್ನು ನಿವಾರಿಸುವ ಶಕ್ತಿಯಿದೆ. ಈ ದೇಗುಲದಲ್ಲಿ ಕುಂಡಲಿನಿಯ ಸ್ವಾಧಿಷ್ಠಾನ ಚಕ್ರವನ್ನು ಪ್ರಚೋದಿಸುವ ಶಕ್ತಿಯಿದೆ.

**೩. ಆರ್ಯನ್‌ಕಾವು ಶ್ರೀ ಧರ್ಮಶಾಸ್ತ ದೇವಸ್ಥಾನ:** ಇದು ತಮಿಳುನಾಡು ಗಡಿಯ ಹತ್ತಿರವಿದ್ದು ಕೇರಳದ ಕೊಲ್ಲಂ ಜಿಲ್ಲೆಯಲ್ಲಿದೆ. ದೇವಸ್ಥಾನವು ನೆಲದಿಂದ 35 ಅಡಿ ಕೆಳಗೆ ನಿರ್ಮಿತವಾಗಿದೆ. ಈ ದೇವಸ್ಥಾನದಲ್ಲಿ ಮಣಿಪುರ ಚಕ್ರವು ಪ್ರಚೋದಿಸಲ್ಪಡುತ್ತದೆ. ದೇವರ ಮೇಲೆ ಚಿತ್ತಾಕರ್ಷಣೆಗೊಳ್ಳುವ ಸಾಧ್ಯತೆಯಿರುವ ಕಾರಣ ಮಹಿಳೆಯರು ಹತ್ತು ಮೀಟರ್ ದೂರದಲ್ಲಿರುವ ನಮಸ್ಕಾರ ಮಂಟಪದಿಂದ ದೇವರನ್ನು ದರ್ಶನ ಮಾಡಬೇಕು ಎನ್ನುವ ಪದ್ಧತಿಯಿದೆ. ಇಲ್ಲಿ ಧರ್ಮಶಾಸ್ತನಿಗೆ ಪುಷ್ಕಳದೇವಿ ಎಂಬ ಸಂಗಾತಿಯಿದ್ದಾಳೆ. ಹಿಂದೊಮ್ಮೆ ಸೌರಾಷ್ಟ್ರದಿಂದ ರೇಷ್ಮೆ ವ್ಯಾಪಾರಕ್ಕೆಂದು ತಮಿಳುನಾಡಿಗೆ ಬಂದ ವ್ಯಾಪಾರಿಯೊಬ್ಬ ತನ್ನ ಮಗಳನ್ನು ಕೆಲಕಾಲ ಇಲ್ಲಿ ಬಿಟ್ಟು ಹೋಗುತ್ತಾನಂತೆ. ವ್ಯಾಪಾರಿ ಹಿಂತಿರುಗಿ ಬಂದಾಗ ಅವಳು ಧರ್ಮಶಾಸ್ತನೊಡನೆ ಐಕ್ಯವಾಗಿರುತ್ತಾಳಂತೆ. ಹಾಗಾಗಿ ತಮಿಳುನಾಡಿನಲ್ಲಿ ನೆಲೆಸಿರುವ ಸೌರಾಷ್ಟ್ರದವರು ಇಲ್ಲಿ ಪ್ರತಿವರ್ಷ ಧರ್ಮಶಾಸ್ತ ಹಾಗೂ ಪುಷ್ಕಳದೇವಿಗೆ ತಿರುಕಲ್ಯಾಣವೆಂಬ ಉತ್ಸವವನ್ನು ನಡೆಸುತ್ತಾರೆ.

**೪. ಕಲತ್ತುಪುಝ ಬಾಲಶಾಸ್ತಾ ಮಂದಿರ:** ಇದು ಕೊಲ್ಲಂ ಜಿಲ್ಲೆಯ ಕಲತ್ತುಪುಝ ರಕ್ಷಿತಾರಣ್ಯದ ಮಧ್ಯೆಯಿದೆ. ಇಲ್ಲಿ ಬಾಲಶಾಸ್ತನ ರೂಪದಲ್ಲಿರುವ ವಿಗ್ರಹದ ಕರಗಳಲ್ಲಿ ಬಿಲ್ಲು ಬಾಣಗಳಿವೆ. ದೇವಸ್ಥಾನದ ಬಾಗಿಲು ತಗ್ಗಾಗಿದ್ದು ಭಕ್ತರು ತಮ್ಮ ಮಕ್ಕಳನ್ನು ಇಲ್ಲಿಗೆ ಕರೆದುಕೊಂಡು ಬರುತ್ತಾರೆ. ಇಲ್ಲಿ ಧರ್ಮಶಾಸ್ತನ ತಂದೆಯಾದ ಶಿವನ ಸಾನ್ನಿಧ್ಯವೂ ಇದೆ. ಇಲ್ಲಿ ಕ್ರಮಬದ್ಧವಾಗಿ ದರ್ಶನ ಮಾಡಿದರೆ, ಹೆತ್ತವರ ಪ್ರೀತಿ ಸಿಕ್ಕಂತೆ, ಹೃದಯ ಭಾಗದಲ್ಲಿರುವ ಅನಾಹತ ಚಕ್ರವು ಜಾಗೃತವಾಗುತ್ತದೆ. ಇಲ್ಲಿರುವ ಕಲತ್ತುಪುಝ ತೊರೆಯಲ್ಲಿ ತಿರುಮಕ್ಕಳ್ ಎಂದು ಕರೆಯಲ್ಪಡುವ ಪವಿತ್ರ ಮೀನುಗಳಿದ್ದು ಅವುಗಳಿಗೆ ಭಕ್ತರು ಆಹಾರವನ್ನು ನೀಡುತ್ತಾರೆ. ಈ ಮೀನುಗಳಿಗೆ ಆಹಾರ ನೀಡಿದರೆ ಚರ್ಮವ್ಯಾಧಿಯು ಗುಣವಾಗುವುದು ಎಂಬ ನಂಬಿಕೆಯಿದೆ.

**೫. ಎರಿಮಲೆ ಶ್ರೀ ಧರ್ಮಶಾಸ್ತ ದೇವಸ್ಥಾನ:** ಇಲ್ಲೇ ಶ್ರೀ ಧರ್ಮಶಾಸ್ತನ ಕೊಚ್ಚಂಬಲ ಅಥವಾ ಕಿರುದೇಗುಲವೂ ಇದೆ. ಇಲ್ಲಿ ಅಯ್ಯಪ್ಪನು ಧನುರ್ಬಾಣಧಾರಿಯಾಗಿ ದರ್ಶನವನ್ನು ನೀಡುತ್ತಾನೆ. ಇಲ್ಲಿ ವಿಶುದ್ಧಿ ಚಕ್ರವು ಜಾಗೃತವಾಗುತ್ತದೆ. ಅಯ್ಯಪ್ಪನ ಭಕ್ತರ ಶಬರಿಮಲೆ ಪಯಣವು ಇಲ್ಲಿಂದ ಆರಂಭವಾಗುತ್ತದೆ. ಮೊದಲ ಬಾರಿ ಮಲೆಗೆ ಹೋಗುವವರು, ಅಂದರೆ ಕನ್ನಿಸ್ವಾಮಿಗಳು ಇಲ್ಲಿಗೆ ಕಡ್ಡಾಯವಾಗಿ ಬರಲೇಬೇಕು. ಹಿಂದಿನ ಕಾಲದಲ್ಲಿ ಬುಡಕಟ್ಟು ಜನಾಂಗದವರು ಅಂದರೆ ಶಬರರು ಇಲ್ಲಿ ಧರ್ಮಶಾಸ್ತನನ್ನು ಪೂಜಿಸುತ್ತಿದ್ದರು. ಅದರ ನೆನಪಿಗಾಗಿ ಅಯ್ಯಪ್ಪನ ಭಕ್ತರು "ಪೆಟ್ಟತುಳ್ಳಲ್" ಅಂದರೆ ಬೇಟೆಯನ್ನು ಆಡುವಂತೆ ಸಾಂಕೇತಿಕವಾಗಿ ವೇಷಧರಿಸಿ ನೃತ್ಯವಾಡುತ್ತಾರೆ. ಮಂಡಲಪೂಜೆ ಹಾಗೂ ಮಕರ ಬೆಳಕಿನ ಸಮಯಗಳಲ್ಲಿ ಅಯ್ಯಪ್ಪ ಮಾಲಾಧಾರಿಗಳ ದೊಡ್ಡಪಾದವೆನ್ನುವ 60 ಕಿಲೋಮೀಟರ್ ದೂರದ ಅತ್ಯಂತ ಕಠಿಣವಾದ ಶಬರಿಮಲೆ ಯಾತ್ರೆಯು ಎರಿಮಲೆಯಿಂದ ಪ್ರಾರಂಭವಾಗುತ್ತದೆ. ಇದೇ ದಾರಿಯಾಗಿ ಮಣಿಕಂಠನು ಹುಲಿಯ ಹಾಲಿಗಾಗಿ ಕಾಡಿಗೆ ಹೋಗಿ ಅಲ್ಲಿ ಮಹಿಷಿಯನ್ನು ಯುದ್ಧದಲ್ಲಿ ಸೋಲಿಸಿ ಮೋಕ್ಷವನ್ನು ಕರುಣಿಸಿದ ಎಂದು ನಂಬಲಾಗಿದೆ.

**೬. ಶಬರಿಮಲೆ ಶ್ರೀ ಅಯ್ಯಪ್ಪ:** ಪಂಪಾ ನದಿಯಿಂದ ಆರು ಕಿಲೋಮೀಟರ್ ದೂರವಿರುವ ಕಡಿದಾದ ಬೆಟ್ಟಗಳ ಮಧ್ಯೆ ಇರುವ ಶಬರಿಮಲೆಯಲ್ಲಿ ಧರ್ಮಶಾಸ್ತನು ಅಯ್ಯಪ್ಪನಾಗಿ, ಸರ್ವಸಂಗ ಪರಿತ್ಯಾಗಿಯಾಗಿ, ಮಹಾಯೋಗಿಯಾಗಿ, ತತ್ವಮಸಿ ಸಿದ್ಧಾಂತದ ಪ್ರತಿಪಾದಕನಾಗಿ, ಅಪ್ಪಟ ಬ್ರಹ್ಮಚಾರಿಯಾಗಿ ನೆಲೆಸಿದ್ದಾನೆ. ಇಲ್ಲಿಗೆ ಸರ್ವಧರ್ಮದವರಿಗೂ ಪ್ರವೇಶವಿದೆ. ಶಬರಿಮಲೆಯು ಭಾರತದಲ್ಲಿ ಅತ್ಯಂತ ಹೆಚ್ಚು ಯಾತ್ರಿಕರನ್ನು ಆಕರ್ಷಿಸುವ ಆಸ್ತಿಕ ಕೇಂದ್ರಗಳಲ್ಲಿ ಒಂದಾಗಿದೆ. ಪೊನ್ನಂಬಲಮೇಡುವಿನ ಮಧ್ಯೆ ಇರುವ ಶಬರಿಗಿರಿಯಲ್ಲಿ, ಹದಿನೆಂಟು ಮೆಟ್ಟಿಲುಗಳ ಸ್ವರ್ಣಾಲಯದಲ್ಲಿ, ಯೋಗಪಟ್ಟಾಸನದ ಭಂಗಿಯಲ್ಲಿ ಅಯ್ಯಪ್ಪನು ತಪೋನಿರತನಾಗಿದ್ದಾನೆ. ಯಾರು ನಲವತ್ತೊಂದು ದಿವಸಗಳ ವ್ರತ ಪಾಲನೆ ಮಾಡಿ, ಅರಿಷಡ್ವರ್ಗಗಳನ್ನು ಗೆದ್ದು, ಪರಿಪೂರ್ಣ ಬ್ರಹ್ಮಚರ್ಯೆಯನ್ನು ಪಾಲಿಸಿ, ಇರುಮುಡಿ ಸಮೇತ ತನ್ನ ದರ್ಶನಕ್ಕೆ ಬರುತ್ತಾನೋ, ಅಂತಹ ಭಕ್ತನಿಗೆ ಅಯ್ಯಪ್ಪ ಅನುಗ್ರಹಿಸುತ್ತಾನೆ.

**ಪಂಪಾಸ್ನಾನಂ ಪರಮ ಪವಿತ್ರಂ**

ನನಗೆ ಧರ್ಮಶಾಸ್ತನ ಎಲ್ಲ ಕ್ಷೇತ್ರಗಳನ್ನು ದರ್ಶಿಸುವ ಭಾಗ್ಯ ಇನ್ನೂ ಕೂಡಿ ಬಂದಿಲ್ಲದಿದ್ದರೂ ಶಬರಿಮಲೆಯೆಂಬ ದಿವ್ಯ ಸಾನ್ನಿಧ್ಯಕ್ಕೆ ಹಲವು ಬಾರಿ ದರ್ಶನ ನೀಡಿದ್ದೇನೆ. ಎರಿಮಲೆಗೂ ಹತ್ತಾರು ಸಲ ಹೋಗಿದ್ದೇನೆ. ಶಬರಿಮಲೆಗೆ ಪ್ರತಿಸಲ ಹೋದಾಗ ಏನಾದರೊಂದು ದಿವ್ಯಾನುಭವವಾದರೂ 2007ರಲ್ಲಿ ಆದ ಅನುಭವ ಮಾತ್ರ ನನ್ನ ಮನಃಪಟಲದಲ್ಲಿ ಇನ್ನೂ ಅಚ್ಚಳಿಯದೆ ನಿಂತಿದೆ.

ಬೆಂಗಳೂರಿನಲ್ಲಿ ಉದ್ಯೋಗದಲ್ಲಿರುವ ನಾನು ಮತ್ತೆ ಪ್ರತಿಸಲ ಶಬರಿಮಲೆಗೆ ಹೋಗುವ ಇಬ್ಬರು ಮಿತ್ರರು 2007ರಲ್ಲಿ ಶಬರಿಮಲೆಗೆ ಹೊರಡಲು ಸಿದ್ಧರಾದೆವು. ಈ ಸಲ ನವಂಬರ ತಿಂಗಳ ಮಂಡಲಕ್ಕೆ ಸನ್ನಿಧಾನದ ಬಾಗಿಲು ತೆರೆಯುವ ದಿನದಂದೇ ತಲುಪುವಂತೆ ಯೋಜನೆ ಹಾಕಿದೆವು. ನಾನಾಗಲೇ ಹಲವು ಬಾರಿ ಶಬರಿಮಲೆಗೆ ಹೋಗಿದ್ದ ಕಾರಣ ಈ ಸಲವೂ ನಾನೇ ಗುರುಸ್ವಾಮಿಯಾಗಬೇಕಾಯಿತು. ಈ ಸಲ ನಮ್ಮ ತಂಡಕ್ಕೆ ಇಬ್ಬರು, ಮೊದಲ ಬಾರಿಗೆ ಹೋಗುವ ಕನ್ನಿಸ್ವಾಮಿಗಳಾಗಿ ಸೇರ್ಪಡೆಯಾದರು. ಅಂತೂ ನಾವು ಹಲವು ದಿನಗಳ ವ್ರತವನ್ನು ಪಾಲಿಸಿ ಹೊರಡಲಣಿಯಾಗಿದ್ದೆವು. ಆದರೆ ಹೊರಡುವ ಹಿಂದಿನ ದಿನ ನನಗೆ ಜ್ವರ ಬಂತು. ಆದರೂ ಮಾಲೆ ಹಾಕಿದ್ದರಿಂದ ಯಾತ್ರೆಯನ್ನು ರದ್ದು ಮಾಡಲಾಗದೆ ಹೊರಡಲೇಬೇಕಾಯಿತು. ಇರುಮುಡಿಯನ್ನು ಮಡಿವಾಳ ದೇವಸ್ಥಾನದಲ್ಲಿ ಕಟ್ಟಿಕೊಂಡು ಕ್ವಾಲೀಸ್ ಗಾಡಿಯಲ್ಲಿ ಹೊರಟೆವು.

ಅಂದು ರಾತ್ರಿ ಗುರುವಾಯೂರು ದೇಗುಲಕ್ಕೆ ತಲುಪಿದಾಗ ಇಡೀ ದಿನದ ಪಯಣದಿಂದಾಗಿ ನನ್ನ ಜ್ವರ ಉಲ್ಬಣವಾಗಿತ್ತು. ಮಾರನೆಯ ದಿನ ಬೆಳಿಗ್ಗೆ ಐದು ಗಂಟೆಗೆ ಅಲ್ಲಿಂದ ಹೊರಟಾಗ ನನ್ನ ಜ್ವರವು ತಾರಕಕ್ಕೇರಿತ್ತು. ನಾವು ಶಬರಿಮಲೆಯ ಕಡೆಗೆ ಸಂಚರಿಸುತ್ತಾ ದಾರಿಯಲ್ಲಿ ಸಿಗುವ ಎಲ್ಲ ಪುಣ್ಯಕ್ಷೇತ್ರಗಳನ್ನು; ತ್ರಿಪುರಯಾರ್ ಶ್ರೀರಾಮ,

ಕೊಡಂಗಲ್ಲೂರು ಭಗವತಿ, ತೃಪಣಿತ್ತುರ ಪೂರ್ಣತ್ರೆಯೇಶ, ಚೋಟಾನಿಕರ ಭಗವತಿ, ವೈಕಂ ಶಿವ, ಏಟ್ಟುಮನೂರು ಮಹದೇವ, ಕಡುತರ್ತಿಯ ಮಹಾದೇವ, ಹೀಗೆ ದೇವರ ಸ್ವಂತನಾಡಿನ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸುತ್ತಾ ಎರಿಮೆಲಿಯಲ್ಲಿ ಸಾಂಕೇತಿಕವಾಗಿ ಪೆಟ್ಟತುಳ್ಳಂ ಆಡಿ ಮುಂದೆ ಪಂಪೆಗೆ ನಾವು ತಲುಪಿದಾಗ ಸಂಜೆ ನಾಲ್ಕು ಗಂಟೆಯಾಗಿತ್ತು.

ನನ್ನ ಮೈಯಂತೂ ಕಾದಕೆಂಡದಂತೆ ಕುದಿಯುತ್ತಿತ್ತು. ಆ ಬಿಸಿಲಿಗೂ ನಾನು ಚಳಿಯಲ್ಲಿ ನಖಶಿಖಾಂತವಾಗಿ ನಡುಗುತ್ತಿದ್ದೆ. ನಿಶ್ಯಕ್ತಿ ನನ್ನನ್ನಾವರಿಸಿತ್ತು. ವಿಧಿ ಪ್ರಕಾರ ಪಂಪಾನದಿಯಲ್ಲಿ ಸ್ನಾನ ಮಾಡಿ ಮಡಿಯುಟ್ಟು ಮುಂದೆ ಆರು ಕಿಲೋಮೀಟರ್ ದುರ್ಗಮವಾದ ಶಬರಿಮಲೆಯ ಬೆಟ್ಟವನ್ನು ಬರಿಕಾಲಲ್ಲಿ ಏರಬೇಕು. ನಾನಂತೂ, ಇನ್ನು ನನ್ನಿಂದ ಆಗುವುದಿಲ್ಲ, ನನ್ನ ಇರುಮುಡಿಯನ್ನು ಒಬ್ಬರ ಶಿರದಲ್ಲಿಟ್ಟು ಬೀಳ್ಕೊಟ್ಟು ಅಲ್ಲೇ ಗಾಡಿಯಲ್ಲಿ ವಿರಮಿಸುವುದಾಗಿ ಹೇಳಿದೆ. ಆದರೆ ಅದು ನಮ್ಮ ತಂಡದವರಿಗೆ ವಿಹಿತವೆನಿಸಲಿಲ್ಲ. “ನೀವು ಗುರುಸ್ವಾಮಿಗಳು. ನಿಮ್ಮ ಜೊತೆಯಲ್ಲೇ, ನಿಮ್ಮ ಮಾರ್ಗದರ್ಶನದಲ್ಲೇ ನಾವು ಅಯ್ಯಪ್ಪ ದೇವರ ದರ್ಶನ ಮಾಡುವುದು ವಿಹಿತ” ಎಂದು ಎಲ್ಲರೂ ಪಟ್ಟು ಹಿಡಿದರು. “ನಾವು ನಿಧಾನವಾಗಿ ದಾರಿಯಲ್ಲಿ ವಿರಮಿಸುತ್ತಾ ಮೇಲೇರುವ. ಶಾಸ್ತ್ರಕ್ಕೆ ಪಂಪಾನದಿ ನೀರನ್ನು ತಲೆಗೆ ಪ್ರೋಕ್ಷಣೆ ಮಾಡಿ” ಎಂದು ನನ್ನನ್ನು ಅವರೆಲ್ಲ ಹುರಿದುಂಬಿಸಿದರು. ಅವರ ಕೋರಿಕೆಯಿಂದ ಪ್ರೇರಣೆಯಾಗಿ ‘ನೋಡೋಣ’ ಎಂದು ನಡುಗುತ್ತಾ ಪಂಪಾನದಿಯ ದಡಕ್ಕೆ ಬಂದೆ. ನವಂಬರ್ ತಿಂಗಳಾದ್ದರಿಂದ ಪರಮ ಪವಿತ್ರವಾದ ಪಂಪಾ ನದಿಯು ಮಂದಗತಿಯಲ್ಲಿ ಹರಿಯುತ್ತಿತ್ತು. ನೀರು ಸ್ಫಟಿಕದಂತಿತ್ತು. ಅಯ್ಯಪ್ಪಸ್ವಾಮಿಯ ಪ್ರಿಯವಾದ ಆ ನದಿಯಲ್ಲಿ ಏನೋ ಆಕರ್ಷಣೆಯಿತ್ತು. ಅವರು ನೋಡುನೋಡುತ್ತಿದ್ದಂತೆ ನಾನು ನೀರಿಗಿಳಿದು ನನ್ನಲ್ಲಿದ್ದ ಶಕ್ತಿಯನ್ನೆಲ್ಲಾ ಸಂಚಯಿಸಿ “ಸ್ವಾಮಿಯೇ ಶರಣಂ ಅಯ್ಯಪ್ಪ” ಎಂದು ಒಂದು ಮುಳುಗು ಹಾಕಿದೆ. ನನಗೆ ನಂಬಲಾಗಲಿಲ್ಲ. ನನ್ನ ಚಳಿಯೆಲ್ಲವೂ ಮೇಲೆ ಕಾಣುತ್ತಿದ್ದ ಪುಲಿಮೇಡನ್ನು ದಾಟಿ ಓಡಿಹೋಗಿತ್ತು. ಮೈಯಲ್ಲಿ ಏನೋ ಒಂದು ಶಕ್ತಿ ಆವೇಶಿಸಿದಂತೆ ಭಾಸವಾಯಿತು. “ಪಂಪಾ ಸ್ನಾನಂ ಪರಮ ಪವಿತ್ರಂ!” ಎನ್ನುತ್ತ ಮತ್ತೊಂದು ಮುಳುಗು ಹಾಕಿದಾಗ ಚೈತನ್ಯವು ನನ್ನನ್ನಾವರಿಸಿತ್ತು. ಇನ್ನೊಂದು ಮುಳುಗು ಹಾಕಿದೆ. ಮತ್ತೊಂದು. ಹೀಗೆ ಸುಮಾರು ಹತ್ತು ನಿಮಿಷ ಆ ತಿಳಿನೀರ ಸಲಿಲೆಯಲ್ಲಿ ಮಿಂದೆ. ನನಗೆ ಜ್ವರವಿತ್ತೆಂಬ ವಿಷಯವೇ ಮರೆತುಹೋಗಿತ್ತು. ಆಗ ನನ್ನ ಜೊತೆಗಾರರು “ರಮೇಶ ಸ್ವಾಮಿ, ಸಾಕು, ಇನ್ನು ಹೋಗೋಣ. ನಿಮಗೆ ಚಳಿಜ್ವರವಿದೆಯಲ್ಲ?” ಎಂದು ನನ್ನನ್ನೆಚ್ಚರಿಸಿದರು. ಅತ್ಯಂತ ಉಲ್ಲಾಸದಿಂದ ಮೇಲೆ ಬಂದ ನಾನು “ಯಾರಿಗೆ ಸ್ವಾಮೀ ಚಳಿ ಜ್ವರ? ಅದೆಲ್ಲಾ ಪಂಪಾ ನದಿಯ ನೀರಲ್ಲಿ ಕೊಚ್ಚಿಕೊಂಡು ಹೋಯಿತು” ಎಂದು ನಕ್ಕೆ. ಯಥಾರ್ಥವಾಗಿ ನನಗೆ ಚಳಿ ಜ್ವರ ಬಂದಿದ್ದರ ಕುರುಹು ಇಲ್ಲದಷ್ಟು ನಾನು ಚೇತರಿಸಿಕೊಂಡಿದ್ದೆ.

ಅಲ್ಲಿಂದ ನಾವು ಜೊತೆಗೆ ಹೊರಟು ಕರಿಮನೆಯಾದಿ ಬೆಟ್ಟಗಳನ್ನು ಯಾವುದೇ ತೊಡಕಿಲ್ಲದೆ ಸಲೀಸಾಗಿಯೂ ವೇಗವಾಗಿಯೂ ಹತ್ತಿದ್ದೆವು. ಶರಂಗುತ್ತಿಯನ್ನು ದಾಟಿ, ಪದಿನೆಟ್ಟಾಂ ಪಡಿ ಹತ್ತಿ ಸನ್ನಿಧಾನದಲ್ಲಿ ಸಾಲಲ್ಲಿ ನಿಂತು ಇರುಮುಡಿ ಸಮೇತ ದೇವರ ದರ್ಶನ ಮಾಡುವ ತನಕ ಯಾವುದೇ ದೇಹಾಲಸ್ಯವು ನನ್ನನ್ನು ಬಾಧಿಸಲಿಲ್ಲ. ಅಂದು ರಾತ್ರಿ ಸನ್ನಿಧಾನದ ಸನಿಹದಲ್ಲಿ ಉಳಿದುಕೊಂಡ ನಾವು ಮಾರನೆಯ ದಿನ ಬೆಳಿಗ್ಗೆ ತುಪ್ಪಾಭಿಷೇಕ ಮಾಡಿಕೊಂಡು, ಕೆಳಗಿಳಿದು ಬಂದು ಪಂಪೆಯನ್ನು ದಾಟಿ ವಾಹನದಲ್ಲಿ ಕುಳಿತುಕೊಂಡು ಮರುದಿನ ಬೆಳಿಗ್ಗೆ ಮನೆಗೆ ತಲುಪುವ ತನಕವೂ ನನಗೆ ಜ್ವರವಿರಲಿಲ್ಲ. ಬೆಂಗಳೂರಿಗೆ ಬಂದ ನಂತರ ಎರಡು ದಿನಗಳ ವಿಶ್ರಾಂತಿ ಪಡೆದು ಕೆಲಸಕ್ಕೆ ಹಾಜರಾಗಿದ್ದೆ.

ಅಂತೂ ನನಗಂದು ಆದ ಅನನ್ಯ ಅನುಭವವೇ “ಪಂಪಾ ನದಿಯ ಸ್ನಾನ”. ತಣ್ಣೀರಿನ ಸ್ನಾನ ನನ್ನ ಜ್ವರವನ್ನು ತಾರಕಕ್ಕೇರಿಸುವ ಬದಲು ಸಂಪೂರ್ಣವಾಗಿ ನಿವಾರಿಸಿತು, ಎಂದರೆ ಪಂಪಾವಾಸಿಯಾದ ಅಯ್ಯಪ್ಪನ ಸಾನ್ನಿಧ್ಯ ಆ ಪುಣ್ಯ ಸಲಿಲೆಯ ಪ್ರತಿಯೊಂದು ಬಿಂದುವಿನಲ್ಲಿದೆ ಎಂಬ ಸತ್ಯಾರ್ಥ ಅಂದು ನನಗಾಗಿತ್ತು.

**“ಸ್ವಾಮಿಯೇ ಶರಣಂ ಅಯ್ಯಪ್ಪ”.**



ರಮೇಶ್ ಶೆಟ್ಟಿಗಾರ್ ಮಂಜೇಶ್ವರ
ಸುಂದರ್ರಾಮ್ ಶೆಟ್ಟಿ ನಗರ,
ಬೆಂಗಳೂರು

# ಭೂತಾರಾಧನೆ

ತಿರಿ ಪಿಂಗಾರ ಕುಣಿ-ಕುಣಿಯುತಲಿತ್ತು
ಕುಣಿ ಕುಣಿದು ದಣಿದು ಪಿರಿಯಿತು!

ಸಂಸ್ಕಾರ, ನಿಯತ್ತು, ನಿಯಮ, ದೈವಭಯ-ಭಕ್ತಿ,
ಕುಣಿಯುತಲಿತ್ತು - ಕುಣಿಯುತಲ್ಲಿತ್ತು
ಮಲ್ಲಿಗೆ ಹಾರ ನೇಯ್ಗೆ ಸರಣಿ ತೆರದಿ

ಸಮಾನ - ಆದ್ಯತೆ, ಮನ್ನಣೆ, ಹಿರಿಯರು, ಗ್ರಾಮಸ್ಥರು, ನಡೆ-ನಡಾವಳಿ - ಎಲ್ಲವೂ,
ನಾದಸ್ವರ - ವಾದ್ಯ ತಾಳಗತಿಯ ಕಾಲಾಲಾಪದ ತೆರದಿ

ಸತ್ಯ,ನ್ಯಾಯ, ನಿಷ್ಠೆ, ಧರ್ಮದ ಉದ್ಘೋಷ,
ಗಗ್ಗರದ ಪಡಿ-ನುಡಿ ಎಚ್ಚರದ ಧ್ವನಿ ಉತ್ತುಂಗ ವರದಿ,
ಚರಿತ್ರೆಕಾರನ ಕಾರಣಿಕ ಉಲ್ಲೇಖ ಪರಾಕು,
ಕಟ್ಟುಪಾಡಿನ ಬಂಧಿತ ಪಾಡ್ದನ - -

ಆವೇಶದ ಭೂತ ಕುಣಿದರೂ ಕುಣಿದೀತೂ ಮುಕ್ಕಾಲು-ಮೂರು ಘಳಿಗೆ
ಅನುಸಂಧಾನಗತ ಜೀವನಾದರ್ಶವಂತೂ ಆವೇಶ ಮರೆತು ಕುಣಿಯುತ್ತಲ್ಲಿತ್ತು -
ಭೂತ-ವರ್ತ-ಭವಿಷ್ಯಮಾನ ಮೂರ್ಕಾಲ -
ನಿತ್ಯ ನಿರಂತರ ಜೀಟಿಗೆ ಧೊಂದಿಯ ಸತ್ಯ ಸಾನ್ನಿಧ್ಯದಲ್ಲಿ!!



ಎಕ್ಕಾರ್ ಡಿ. ಪಿ. ಶೆಟ್ಟಿಗಾರ್
ಶೇಷಾದ್ರಿಪುರಂ, ಬೆಂಗಳೂರು



Photo Credits: Yashaswi J



# ಸಂಪಾದಕ ವಾಣಿ

## ನಾರಾಯಣ ಶೆಟ್ಟಿಗಾರ್

ಸೂರ್ಯ ತನ್ನ ಪಥ ಬದಲಿಸುವ ಪರ್ವಕಾಲವನ್ನು ಸಂಕ್ರಾಂತಿ ಅಥವಾ ಸಂಕ್ರಮಣ ಎನ್ನುತ್ತಾರೆ. ಸೌರಮಾನದ 12 ಮಾಸಗಳಾದ ಮೇಷ ಮಾಸದಿಂದ ಹಿಡಿದು ಮೀನ ಮಾಸದ ವರೆಗೂ ಸೂರ್ಯ ತನ್ನ ಪಥವನ್ನು ಬದಲಿಸುತ್ತಾನಾದರೂ ಧನುರ್ ಮಾಸದಿಂದ ಮಕರ ಮಾಸಕ್ಕೆ ಸೂರ್ಯ ಬದಲಿಸುವ ಕಾಲವನ್ನು ಮಕರ ಸಂಕ್ರಾಂತಿಯೆಂದು ಆಚರಿಸಲಾಗುತ್ತದೆ. ಮಕರ ಸಂಕ್ರಾಂತಿಯಿಂದ ಉತ್ತರಾಯಣ ಪುಣ್ಯಕಾಲ ಆರಂಭವಾಗುತ್ತದೆ. ಸಾಮಾನ್ಯವಾಗಿ ಪ್ರತಿವರ್ಷ ಜನವರಿ 14 (ಅಥವಾ 15) ರಂದು ಮಕರ ಸಂಕ್ರಮಣ ಆಚರಿಸಲಾಗುತ್ತದೆ. (ವಾಸ್ತವದಲ್ಲಿ ಡಿಸೆಂಬರ್ 22 ರಂದು ಉತ್ತರಾಯಣ ಪ್ರಾರಂಭಗೊಂಡರೂ ಮಕರ ಸಂಕ್ರಮಣದಿಂದಲೇ ಉತ್ತರಾಯಣವನ್ನು ಆಚರಿಸಲಾಗುತ್ತದೆ.) ಧನುರ್ಮಾಸದಲ್ಲಿ ಶುಭ ಕಾರ್ಯಗಳಿಗೆ ಪ್ರಾಶಸ್ತ್ಯ ಇರುವುದಿಲ್ಲ. ಮಕರ ಮಾಸ ಆರಂಭವಾಗುತ್ತಿದ್ದಂತೆ ಮದುವೆ, ಗೃಹಪ್ರವೇಶ ಮೊದಲಾದ ಶುಭ ಕಾರ್ಯಗಳು ಪ್ರಾರಂಭವಾಗುತ್ತವೆ. ಮಹಾಭಾರತದಲ್ಲಿ ಇಚ್ಛಾಮರಣಿಯಾಗಿದ್ದ ಭೀಷ್ಮಾಚಾರ್ಯರು ಕೂಡಾ ತಮ್ಮ ದೇಹತ್ಯಾಗಕ್ಕಾಗಿ ಉತ್ತರಾಯಣ ಕಾಲವನ್ನೇ ಕಾಯುತ್ತಿದ್ದರಂತೆ. ಮಕರ ಸಂಕ್ರಾಂತಿಯ ದಿನ ದೇವತೆಗಳು ಭೂಮಿಗೆ ಇಳಿದುಬಂದು ಗಂಗಾಸ್ನಾನ ಮಾಡುವರೆಂಬ ನಂಬಿಕೆಯೂ ಇದೆ.

ಹೊಸ ಬಟ್ಟೆ ತೊಟ್ಟು , ಎಳ್ಳು ಬೆಲ್ಲ ಸವಿಯುತ್ತ ಆಚರಿಸಲ್ಪಡುವ ಸಂಕ್ರಾಂತಿ ಹಬ್ಬ ಹೆಂಗಳೆಯರಿಗೆ ಅಚ್ಚುಮೆಚ್ಚು. ಮಕರ ಸಂಕ್ರಾಂತಿಯ ದಿನ ಕೇರಳದ ಶಬರಿಮಲೆಯಲ್ಲಿ ಕಾಣುವ ಮಕರಜ್ಯೋತಿ ಜಾಗತಿಕ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿದೆ. ಉತ್ತರಪ್ರದೇಶದ ಪ್ರಯಾಗರಾಜ್ ನಲ್ಲಿ ಪ್ರಸಿದ್ಧ ಮಾಘಮೇಳ ಮಕರ ಸಂಕ್ರಾಂತಿಯಂದು ಪ್ರಾರಂಭಗೊಳ್ಳುತ್ತದೆ. ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಮಕರ ಸಂಕ್ರಮಣದ ಆಚರಣೆ ನಡೆಯುತ್ತದೆ. ಕೆಲವು ಕಡೆಗಳಲ್ಲಿ ಗಾಳಿಪಟ ಹಾರಾಡಿಸುವ ಸಂಪ್ರದಾಯವೂ ಈ ದಿನದ ಮಹತ್ವವಾಗಿದೆ. ಬ್ರಹ್ಮ ದೇವನು ತನ್ನ ಸೃಷ್ಟಿ ಕಾರ್ಯವನ್ನು ಪ್ರಾರಂಭಿಸಿದ್ದು , ಕೃತಯುಗದಲ್ಲಿ ಶಿವಪಾರ್ವತಿಯರು ವಿವಾಹವಾಗಿದ್ದು , ಇಂದ್ರನಿಗೆ ಗೌತಮರು ಶಾಪ ವಿಮೋಚನೆ ಮಾಡಿದ್ದು , ಶ್ರೀಮನ್ನಾರಾಯಣನು ವರಾಹ ಅವತಾರದಿಂದ ಭೂಮಿಯ ಮೇಲೆ ಪಾದಸ್ಪರ್ಶ ಮಾಡಿದ್ದು , ಸಮುದ್ರಮಥನದಲ್ಲಿ ಮಹಾಲಕ್ಷ್ಮಿ ಅವತರಿಸಿದ್ದು ಉತ್ತರಾಯಣ ಕಾಲದಲ್ಲಿಯೇ ಎಂದು ಹೇಳಲಾಗುತ್ತದೆ.

**2025ರ ಹೊಸ ವರುಷ ಹೊಸ ಹರುಷ ತರಲಿ.**

**ನಿಮಗೆಲ್ಲರಿಗೂ ಮಕರ ಸಂಕ್ರಾಂತಿಯ ಶುಭಾಶಯಗಳು.**

# ಮದುವೆಯ ಅನುಬಂಧ


AI generated image. No photo credits required

"ಇಲ್ಲಿ ನೋಡು ಮಗಳೇ. ಈ ಸೀರೆ ಇಷ್ಟವಾಯ್ತಾ? ಬಣ್ಣ ಹೇಗಿದೆ?. ಈ ಕಾಲ್ಗೆಜ್ಜೆ ವಿನ್ಯಾಸ ಇಷ್ಟವಾಯ್ತಾ? ಬಿಂದಿ ಇಟ್ಟುಕೊಳ್ಳುವುದು ಮಾತ್ರ ಮರೆಯ ಬೇಡ. ಈಗೆಲ್ಲಾ ಕೆಲವು ಹೆಣ್ಮಕ್ಕಳು ಹಾಕುವುದೇ ಇಲ್ಲ. ಎಷ್ಟು ಸಿಂಗಾರ ಮಾಡಿಕೊಂಡ್ರೂ ಮುಖದ ಕಳೆ ಶೂನ್ಯವಾಗಿರುತ್ತೆ. ಮಲ್ಲಿಗೆ ಹೂವು ಐದು ಅಟ್ಟೆ ಹೇಳಿರುವೆ. ಇವತ್ತು ಸಾಯಂಕಾಲ ನೆರಮನೆ ಶಂಕರಿ ಅತ್ತೆ ತರುವರು. ನಮ್ಮ ಊರ ಕಡೆಯವರು ಮನೆಯಲ್ಲೇ ಕಟ್ಟಿದ್ದು ನೋಡಲು ಅದೆಷ್ಟು ಚೆಂದ.....ಪುಟ್ಟಿ, ಪುಟ್ಟಿ ಮಾತಾಡೇ. ಯಾವುದಕ್ಕೂ ಉತ್ತರ ಕೊಡದೇ ನನ್ನ ಮುಖ ನೋಡ್ತಾ ಕುಳಿತುಕೊಂಡೆ. ನಾಳೆ ನಿನ್ನ ಮದುವೆ. ಖುಷಿ ಖುಷಿಯಾಗಿ ಇರೋದು ಬಿಟ್ಟು, ಬಂದ ನೆಂಟರೆದುರು ಸಪ್ಪೆ ಮುಖ ಮಾಡಿ...." ನಿಲ್ಲದೇ ಸಾಗುತ್ತಿದೆ ಚಿಕ್ಕಪ್ಪನ ನುಡಿ ತೇರು.

ಅಣ್ಣನ ಮಗಳು ಸಂಭ್ರಮಾಳ ಮದುವೆಯ ಸಂಭ್ರಮ. ಚಿಕ್ಕಪ್ಪ ಶ್ರೀಕಾಂತನಿಗೆ ಸಂಭ್ರಮವೋ ಸಂಭ್ರಮ. ಆದರೆ ಅಣ್ಣ- ಅತ್ತಿಗೆ, ಮದುಮಗಳು ಖುಷಿಯಾಗಿಲ್ಲ. ತೋರಿಸಿಕೊಳ್ಳದೇ ಓಡಾಡುತ್ತಿದ್ದಾರೆ ಅಷ್ಟೇ...
*****

"ಅಮ್ಮನಿಗೆ ಕಾಲು ಉಳುಕಿದ ಹಾಗೆ ಸ್ವಲ್ಪ ನೋವಿದೆ. ಹೂವಿನ ಮೊಗ್ಗು ಕಟ್ಟಿ ಆಯ್ತು ಶ್ಯಾಮಲಕ್ಕಾ, ಯಾರಾದರೂ ಬಂದಿದ್ರೆ ಕೊಟ್ಟು ಕಳಿಸುತ್ತಿದ್ದೆ" ಪಕ್ಕದ್ಮನೆಯಿಂದ ಗಿರಿಜೆಯ ಕರೆ ಬಂದಾಗ ಸಂಭ್ರಮಾಳ ತಾಯಿ ಶ್ಯಾಮಲಾ "ಅಯ್ಯೋ! ಮಾರಾಯ್ತಿ. ಪುರುಸೊತ್ತೇ ಇಲ್ಲ. ನೀನೇ ತಂದು ಕೊಡು" ಎಂದರು.

"ಅಲ್ಲಾ ಅಕ್ಕ, ನಾನು ಹೇಗೆ ತರಲಿ? ಶುಭ ಕಾರ್ಯ...." ಎನ್ನುವಾಗಲೇ ಗಿರಿಜೆ, ಆಕೆಯನ್ನು ತಡೆದ ಶ್ಯಾಮಲಾ "ಸುಮ್ನೇ ಹಿಡಿದು ಬಾ. ಅದೆಲ್ಲಾ ಈಗ ಯಾಕೆ?" ಎಂದು ಹೇಳಿ ಮೊಬೈಲ್ ಬದಿಗಿರಿಸಿದರು.
*******

ಐದು ನಿಮಿಷದಲ್ಲೇ ಹೂವಿನೊಡನೆ ಸಂಭ್ರಮಾಳ ಮನೆ ಹೊಕ್ಕಳು ಗಿರಿಜೆ. ಎದುರು ಸಿಕ್ಕ ಶ್ರೀಕಾಂತನ ಬಳಿ ಹೂ ಕೊಟ್ಟು ಹಿಂದೆ ಹೊರಟವಳನ್ನು ಓಡಿ ಬಂದ ಸಂಭ್ರಮಾ ಎಳೆದುಕೊಂಡೇ ಹೋಗಿ ತನ್ನ ಕೋಣೆಯ ಬಾಗಿಲು ಹಾಕಿಕೊಂಡಳು.

"ಇವಳಿಗೇನಾಯಿತು ಅತ್ತಿಗೆ ಇದ್ದಕ್ಕಿದ್ದಂತೆ?" ಶ್ರೀಕಾಂತನಿಗೆ ಮಾತ್ರವಲ್ಲ ಅಲ್ಲಿ ನೆರೆದಿದ್ದ ನೆಂಟರೆಲ್ಲರಿಗೂ ಆಶ್ಚರ್ಯ.

"ಹೋಗಿ ಹೋಗಿ ಆಚೆ ಮನೆಯವಳ ಜೊತೆ ಅದೂ ಗಂಡ ಇಲ್ಲದವಳ ಜೊತೆ ಮಾತುಕತೆ. ಇವಳಿಗೆ ಏನಾದರೂ ಬೇಕಿದ್ದರೆ ನಾನು ಹೇಳುವುದಿಲ್ವಾ? ಅವಳು ಗಂಡ ಬಿಟ್ಟು ಬಂದವಳು ಬೇರೆ. ಏನಾದರೂ ಬೇಕಿದ್ದರೆ ನಾನು ಹೇಳುವುದಿಲ್ವಾ?" ಮೂತಿ ತಿರುವಿದಳು ಸಂಭ್ರಮಾಳ ಚಿಕ್ಕ ಸೋದರತ್ತೆ.

"ಸಾಕು ಸುಮ್ಮನೆ ಇರು. ಗಿರಿಜೆ ಎಂಥವಳು ಎಲ್ಲರಿಗೂ ಗೊತ್ತಿದೆ. ಯಾಕೆ ಗಂಡನನ್ನು ಬಿಟ್ಟು ಬರುವ ನಿರ್ಧಾರ ತಳೆದಳು? ನಿನಗೂ ಗೊತ್ತಿದೆ. ತನ್ನ ಕಣ್ಣೆದುರು ಗಂಡ ಇನ್ನಾರದೋ ಜೊತೆ ಇರುವುದನ್ನು ಯಾವ ಹೆಂಡತಿಯೂ ಸಹಿಸುವುದಿಲ್ಲ. ನೀನಾದರೂ ಸಹಿಸಲು ಸಾಧ್ಯವೇ?"

"ವಿಚ್ಛೇದನ ನೀಡಿ ಗೌರವದಿಂದ ಹೊರ ಬಂದು ಗೌರವದಲ್ಲೇ ಬಾಳುತ್ತಿದ್ದಾಳೆ. ಈ ಜಾತಿ ಒಂದು ಅಡ್ಡ ಬರದಿದ್ದರೆ ಅವಳ ಜೀವನ ನಾನೇ ಸರಿಪಡಿಸುತ್ತಿದ್ದೆ" ಎಂದ ಸಂಭ್ರಮಾಳ ಅಜ್ಜಿ ಕುಳಿತಲ್ಲಿಂದಲೇ ತನ್ನ ಊರುಗೋಲು ಎತ್ತಿ ಮಗಳ ತಲೆಗೆ ಮೊಟಕಿದರು.
*******

"ನನ್ನ ಪುಟ್ಟಿ ಎಷ್ಟು ಚೆಂದ ಕಾಣ್ತಾ ಇದ್ದಾಳೆ. ಒಂದ್ನಿಮಿಷ" ಎಂದ ಶ್ರೀಕಾಂತ ಚಿಕ್ಕಪ್ಪ ಗಲ್ಲದ ಮೇಲೊಂದು ಪುಟ್ಟ ಕಾಡಿಗೆ ಬಿಂದಿ ಇಟ್ಟಾಗ ಸಂಭ್ರಮಾ ಮೊದಲಿನಂತೆ ಕಿಲಕಿಲನೇ ನಗುತ್ತ ಚಿಕ್ಕಪ್ಪನ ಕೈಯೆಳೆದು ಮುತ್ತನಿತ್ತಳು. ತನ್ನೆದೆಗೆ ಅಣ್ಣನ ಮಗಳನ್ನು ಒರಗಿಸಿಕೊಂಡ ಶ್ರೀಕಾಂತನ ಕಣ್ಣಿನಲ್ಲಿ ನೀರು.

ಮದುವೆ ಕಾರ್ಯ ನಡೆಯಲಾರಂಭಿಸಿದೆ. ಸಂಭ್ರಮಾಳನ್ನು ಮದುವೆಯಾಗುವ ಹುಡುಗನ ದಿಬ್ಬಣದೊಡನೆ ಶಂಕರಿಯಕ್ಕನ ಮಗಳು ಗಿರಿಜೆ ಕಂಡಳು. "ಅರೇ, ಇವಳಿಗೇನಾಗಿದೆ ಮದುಮಗಳಂತೆ ಶೃಂಗಾರ ಬೇರೆ." ಸಂಭ್ರಮಾಳ ಕಿರಿಯತ್ತೆ ಗೊಣಗಿದಾಗ ಶ್ಯಾಮಲಾ ಎಂದರು "ಗೊತ್ತಾಗುತ್ತೆ ಬಿಡು. ಸ್ವಲ್ಪ ಹೊತ್ತು ಕಾದಿರು.ನಿನಗೆ ಮೊದಲೇ ಹೇಳಿದರೆ ಕೆಲಸ ಹಾಳು" ಎಂದರು.
*****

"ಏಯ್! ಶ್ರೀಕಾಂತ ಬಾರೋ ಇಲ್ಲಿ" ಎಂದು ಬಳಿಗೆ ಕರೆದ ಅಣ್ಣ ಮತ್ತು ಅಮ್ಮ ಕಿವಿಯಲ್ಲೇನೋ ಹೇಳಿದಾಗ ಶ್ರೀಕಾಂತನ ಮುಖದ ಬಣ್ಣ ಬದಲಾಗಿ ಕಣ್ಣೆರಡು ನಳಿದದ್ದು ಯಾರಿಗೂ ಗೊತ್ತಾಗಲಿಲ್ಲ.

ಒಂದು ಜೋಡಿಯ ಬದಲಿಗೆ ಎರಡು ಜೋಡಿಯ ಮದುವೆ ಎಲ್ಲರ ಸಮಕ್ಷಮದಲ್ಲಿ ನಡೆದಾಗ ಊರ ಮಂದಿ ಕೈಯೆತ್ತಿ ಹರಸಿದರು.
*****

ಎರಡು ವರ್ಷ ಕಳೆದಿದೆ. ಸಂಭ್ರಮಾಳ ಮಡಿಲಲ್ಲಿ ಎರಡು ಪುಟ್ಟ ಕೂಸು ಮಲಗಿದೆ. ಮಗಳು ಮತ್ತು ಪುಟ್ಟ ತಮ್ಮ.

ಗಿರಿಜೆ ಪಕ್ಕದಲ್ಲಿ ಕುಳಿತು ಪಟ ತೆಗೆಯುತ್ತಿದ್ದಾಳೆ.

ಶ್ರೀಕಾಂತ ಮಡದಿ ಮತ್ತು ಮಗಳನ್ನು ನೋಡಿ ನಗುತ್ತಿದ್ದರೆ ಶ್ಯಾಮಲಕ್ಕ ಗಂಡ - ಹೆಂಡತಿ ಮಗ ಮತ್ತು ಮೊಮ್ಮಗಳ ದೃಷ್ಟಿ ತೆಗೆಯುತ್ತಿದ್ದಾರೆ. ಜಗಲಿ ಮೇಲೆ ಕುಳಿತ ಹಿರಿಯಜ್ಜಿಯ ಮೊಗದಲ್ಲಿ ಮಂದಹಾಸ.



**ಶೋಭಾ ಹರಿಪ್ರಸಾದ**
**ಶೆಟ್ಟಿಗಾರ**
**ಉಡುಪಿ**

# ಪ್ರಕೃತಿಯ ಸ್ಪರ್ಶ ಸದಾ ಇರಲಿ

ಪ್ರಕೃತಿ ಮತ್ತು ಮನುಷ್ಯನ ಮನಸ್ಸಿನ ನಡುವೆ ಇರುವ ಸಂಬಂಧವೇನು? ಮಾನವ ಇತಿಹಾಸವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಮನುಷ್ಯನ ಹೆಚ್ಚಿನ ಸಮಸ್ಯೆಗಳು ಆರಂಭವಾಗಿರುವುದೇ ಪ್ರಕೃತಿಯಿಂದ ನಿಧಾನವಾಗಿ ದೂರವಾಗುತ್ತಿರುವುದರಿಂದ. ಪ್ರಕೃತಿಯೆಂದರೆ, ಬರಿ ಮರ ಗಿಡಗಳಲ್ಲ. ಅಲ್ಲಿರುವ ಸಮಸ್ತ ಜೀವ ಸಂಕುಲವೂ ಸೇರಿದೆ. ಆದರೆ, ನಮ್ಮ ದೃಷ್ಟಿ ಕೇವಲ ಹೆಚ್ಚು ದುಡಿದು ಸಂಪಾದಿಸಿ ಇನ್ನಷ್ಟು ಧನರಾಶಿಯನ್ನು ಕೂಡಿಡುವುದರಲ್ಲಿ ಇದೆಯೇ ಹೊರತು, ಪ್ರಕೃತಿಯನ್ನು ಅರಿತು ಸಹಬಾಳ್ವೆ ನಡೆಸುವುದರಲ್ಲಿ ಇಲ್ಲ. ಒಂದು ಕಾಲದಲ್ಲಿ ಪ್ರಕೃತಿಯಿಂದ, ತನಗೆಷ್ಟು ಬೇಕೋ ಅಷ್ಟನ್ನು ಮಾತ್ರ ಪಡೆದುಕೊಳ್ಳುತ್ತಿದ್ದ ಮನುಷ್ಯನ ಬಾಳಲ್ಲಿ ಸಾಕಷ್ಟು ನೆಮ್ಮದಿಯಿತ್ತು. ಆದರೆ, ಯಾವಾಗ, ಪ್ರಕೃತಿಯೊಂದಿಗೆ ವ್ಯವಹಾರಕ್ಕೆ ಇಳಿದನೋ, ಅಲ್ಲಿಂದ ಪ್ರಕೃತಿ ಮತ್ತು ಮನುಷ್ಯನ ನಡುವಿನ ಕೊಂಡಿ ಕಳಚಿಹೋಗಿದೆ. ಇದರಿಂದಾಗಿ, ಪ್ರಕೃತಿ ಮತ್ತು ಜೀವಸಂಕುಲವೆಲ್ಲಾ ಖರೀದಿಸುವ ಮತ್ತು ಮಾರುವ ವಸ್ತುವಾಗಿ ಮಾರ್ಪಟ್ಟಿದೆ. ಇದರ ಫಲವಾಗಿ ಈಗ ಉಳಿದಿರುವುದು ಸಂಪೂರ್ಣವಾಗಿ ಮಾಲಿನ್ಯಗೊಂಡಿರುವ ಮತ್ತು ಹಸಿರಿನ ಹೊದಿಕೆ ಕಳಚಿಕೊಂಡಿರುವ ಸತ್ವಹೀನ ಪರಿಸರ. ಈ ನಿಟ್ಟಿನಲ್ಲಿ, ಅಳಿದುಳಿದಿರುವ ಪ್ರಕೃತಿಯ ಮಹತ್ವವನ್ನು ಮತ್ತು ಅದನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಮಕ್ಕಳಿಗೆ ಪಠ್ಯದ ಮೂಲಕ ತಿಳಿ ಹೇಳಬೇಕಾದ ಅಗತ್ಯವಿದೆ.


AI generated image: No photo credits required

ಪ್ರಕೃತಿಯಿಂದ ನಾವು ಕಲಿಯಬಹುದಾದ ಪಾಠಗಳು ಸಾಕಷ್ಟಿವೆ. ಉದಾಹರಣೆಗೆ, ಜಗತ್ಪ್ರಸಿದ್ಧ ಯೋಗವನ್ನೇ ತೆಗೆದುಕೊಂಡರೆ, ಅಲ್ಲಿನ ಎಲ್ಲಾ ಆಸನಗಳು ಉಳಿದ ಜೀವಿಗಳ ಭಾವ ಭಂಗಿಗಳಿಂದ ಪ್ರೇರಿತವಾಗಿರುವುದು. ಇದರಲ್ಲಿ ಮನುಷ್ಯ ಮಾಡಿರುವ ಮಾರ್ಪಾಡುಗಳೆಂದರೆ, ಪ್ರಾಣಿಗಳ ಚಲನ ವಲನಗಳನ್ನು ಸೂಕ್ಷ್ಮವಾಗಿ ಗಮನಿಸಿ, ತನ್ನ ದೇಹ ಪ್ರಕೃತಿಗೆ ಅನುಗುಣವಾಗಿ ಅಳವಡಿಸಿಕೊಂಡಿರುವುದು. ಅದೇ ರೀತಿ, ಪ್ರತಿ ಜೀವಿಯ ಜೀವನಶೈಲಿಯನ್ನು ಗಮನಿಸಿದರೆ ಅವುಗಳಿಂದ ನಾವು ಕಲಿಯುವ ಜೀವನ ಪಾಠಗಳು ಹಲವಾರು. ನಾವು ಮನೆಯಲ್ಲಿ ಸಾಕುವ ನಾಯಿ ಬೆಕ್ಕುಗಳೇ, ತಮ್ಮ ಆರೋಗ್ಯ ಕೆಟ್ಟಲ್ಲಿ, ಯಾವುದೋ ಹುಲ್ಲನ್ನು ತಿಂದು ಆರೋಗ್ಯ ಸರಿಮಾಡಿಕೊಳ್ಳುವುದನ್ನು ನಾವು ನೋಡುತ್ತೇವೆ. ಪಕ್ಷಿಗಳು ಕಟ್ಟುವ ವಾಸಸ್ಥಾನಗಳ ವಿನ್ಯಾಸಗಳು ಯಾವ ಇಂಜಿನಿಯರಿಗೂ ಬೆರಗು ಹುಟ್ಟಿಸುವಂತಹದ್ದು. ಇರುವೆಗಳ ಶಿಸ್ತುಬದ್ಧ ಜೀವನ ಮತ್ತು ಶ್ರಮ ನಮಗೆ ಪ್ರೇರಣೆ ನೀಡುತ್ತದೆ. ಸಾಕು ಪ್ರಾಣಿಗಳ ನಿಯತ್ತು ನಮ್ಮ ಅಂತಃಕರಣ ತಟ್ಟುತ್ತದೆ. ಜೇಡ ಹೆಣೆಯುವ ಅದ್ಭುತ ಬಲೆ ಹಲವಾರು ಉದಾತ್ತ ಉಪಮೆಗಳನ್ನು ಸೃಷ್ಟಿಸಿದೆ. ನಾವು ಪ್ರಕೃತಿಯ ಆಹಾರ ಕೊಂಡಿಯನ್ನು ಹಾಳು ಮಾಡದೇ ಇದ್ದಲ್ಲಿ, ಎಲ್ಲಾ ಜೀವರಾಶಿಗಳು ಸ್ವಾವಲಂಬಿಯಾಗಿ ಮನುಷ್ಯನ ಹಂಗಿಲ್ಲದೆ ಬದುಕಬಲ್ಲವು.

ಇನ್ನು, ಮಾನಸಿಕ ಆರೋಗ್ಯಕ್ಕೆ ಪ್ರಕೃತಿ ಹೇಗೆ ಸಹಾಯಕವೆನ್ನುವುದನ್ನು ಗಮನಿಸಿದರೆ, ಆಂಗ್ಲ ಕವಿ ಜಾನ್ ಕೀಟ್ಸ್ ಹೇಳಿದಂತೆ, ದಿನದಲ್ಲಿ ಒಂದು ಗಂಟೆ ನಾವು ಪ್ರಕೃತಿಯೊಂದಿಗೆ ಕಾಲಕಳೆದರೆ, ಉಳಿದ ಇಪ್ಪತ್ತೂರು ಗಂಟೆ ನಮ್ಮ ಮನಸ್ಸು ಶಾಂತಿ ಮತ್ತು ನೆಮ್ಮದಿಯಿಂದ ಇರುತ್ತದೆ. ಸಾಮಾನ್ಯವಾಗಿ ನಾವು ಗಮನಿಸುವಂತೆ, ಮಕ್ಕಳು ಮತ್ತು ವಯಸ್ಸಾದವರು ಪ್ರಕೃತಿ ಮತ್ತು ಜೀವ ವೈವಿಧ್ಯಗಳೊಂದಿಗೆ ಹೆಚ್ಚು ಕಾಲ ಕಳೆಯಲು ಇಷ್ಟಪಡುವುದನ್ನು ನೋಡುತ್ತಿರುತ್ತೇವೆ. ಆದರೆ, ಈ ನಡುವಿನ ಹರೆಯದಲ್ಲಿ, ನಾವು ಪ್ರಕೃತಿಯಿಂದ ದೂರವಿದ್ದು ಗಳಿಕೆಯಲ್ಲಿಯೇ ತಲ್ಲೀನರಾಗಿರುತ್ತೇವೆ. ಈ ಸಮಯದಲ್ಲಿಯೂ ಕೂಡ ಪ್ರಕೃತಿಯೊಂದಿಗೆ ನಂಟನ್ನು ಉಳಿಸಿಕೊಂಡಲ್ಲಿ, ಪರಿಸರ ನಾಶ ಕಡಿಮೆಯಾಗುತ್ತದೆ. ಯಾಕೆಂದರೆ, ಪ್ರಕೃತಿ ವಿನಾಶಕಾರಿ ಚಟುವಟಿಕೆಗಳ ನಿರ್ಧಾರ ತೆಗೆದುಕೊಳ್ಳುವವರೆಲ್ಲಾ ಈ ನಡುವಯಸ್ಸಿನವರೇ. ವಿಸ್ಮಯವೆಂದರೆ, ತಮ್ಮ ಅಧಿಕಾರ ಮತ್ತು ಪ್ರಭಾವದ ಮೂಲಕ ದಿಢೀರ್ ಶ್ರೀಮಂತರಾಗುವ ದೆಸೆಯಲ್ಲಿ ಪರಿಸರ ನಾಶ ಮಾಡಿದವರೇ, ತಮ್ಮ ಜೀವನದ ಕೊನೆಯ ಹಂತದಲ್ಲಿ ಪುನಃ ಪ್ರಕೃತಿಯ ಮಡಿಲಿಗೆ ಬರಲು ಹವಣಿಸುತ್ತಾರೆ.

ಮಣ್ಣಿನಿಂದ ಹುಟ್ಟಿ ಮಣ್ಣಿಗೆ ಸೇರುವ ಈ ಮನುಷ್ಯ ದೇಹ, ನಡುವೆ ಆಡುವ ಸ್ವಾರ್ಥದ ಆಟೋಪಾಟಕ್ಕೆ ಪ್ರಕೃತಿ ಬಲಿಯಾಗುತ್ತಿರುವುದು ವಿಷಾದ. ಇದು ಭಸ್ಮಾಸುರನ ಕಥೆಯನ್ನು ನೆನಪಿಸುವಂತಿದೆ. ಅಭಿವೃದ್ಧಿಯ ಹೆಸರಲ್ಲಿ, ಪ್ರಕೃತಿ ಮತ್ತು ಜೀವ ವೈವಿಧ್ಯಗಳ ನಾಶ ಮಾಡದೆ, ಜೀವ ಸಂಕುಲವನ್ನು ಉಳಿಸುವುದರ ಮೂಲಕ ನಮ್ಮ ಉಳಿವನ್ನು ಕಂಡುಕೊಳ್ಳಬೇಕಾದ ಅನಿವಾರ್ಯತೆ ನಮಗಿದೆ.



ಡಾ. ಜ್ಯೋತಿ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

# ವಾಚಕರವಾಣಿ

ಶ್ರೀಮತಿ ಪ್ರೇಮ ನಾರಾಯಣರ “ಎಚ್ಚರಿಕೆ ಮಾನವ ಎಚ್ಚರಿಕೆ” ಬರಹ ಮನಸ್ಸಿಗೆ ತಟ್ಟಿತು. ಪಾಪ, ಕೋಪದಲ್ಲಿ ಮಾವಿನ ಮರ ಮಾತನಾಡಿ ಎಚ್ಚರಿಸಿದ್ರೂ, ಅರಣ್ಯರೋಧನಗೈದರೂ ಮಾನವನ ಕಿವಿಗೆ ಅದು ಬೀಳದೆ ಅವನ ಸ್ವಾರ್ಥಕ್ಕೆ ಬಲಿಯಾಯಿತು. ನಾನು ಶಿರಾಡಿ ಘಾಟ್‌ನಲ್ಲಿ ಪ್ರೇತ ಕುಣಿಸಿದ್ರೆ, ಜಗದೀಶರಾಂ ಜಪ್ತಿಯವರು ಆಗುಂಬೆ ಘಾಟಿನಲ್ಲಿ ಚುಟುಕಾಗಿ ಭೂತ ಕುಣಿಸಿದರು. ಮಾಧವ ಶೆಟ್ಟಿಗಾರರ “ಬದುಕು” ಚಿಂತನೆ ಆಪ್ತವಾಗಿತ್ತು. ಸಿ.ಎ. ವಿಶ್ರಾಂತ್ ಅವರು ಬರೆದ AI ಪ್ರಭಾವ ಪವಿತ್ರ ಸ್ನೇಹ ಬಹಳಷ್ಟು ಮಾಹಿತಿಪೂರ್ಣವಾಗಿತ್ತು. ಚಂದ್ರಶೇಖರ ಶೆಟ್ಟಿಗಾರರ ಆಯ್ದ 25 ಗಾದೆಗಳು ಸಂಗ್ರಹಯೋಗ್ಯವಾಗಿತ್ತು. ಯತೀಶ್ ಶೆಟ್ಟಿಗಾರರ ವ್ಯಂಗ್ಯಚಿತ್ರವು ತಲೆಯಲ್ಲಿ ಬಲ್ಬ್ ಹೊತ್ತಿಸಿತು. ಎಕ್ಕಾರ್ ಡಿ.ಪಿ ಶೆಟ್ಟಿಗಾರರು “ಕನ್ನಡ ನಾಡು ಭಾವೈಕ್ಯತೆಯ ಸಮಾಗಮ” ಕವನದಲ್ಲಿ ಕರುನಾಡನ್ನು ಸೊಗಸಾಗಿ ವರ್ಣಿಸಿದ್ದಾರೆ. ಶೋಭಾ ಹರಿಪ್ರಸಾದ್ ಶೆಟ್ಟಿಗಾರರ “ಹಚ್ಚೋಣ ದೀಪ” ಕವನ ಛಂದೋಬದ್ಧವಾಗಿ ಗುಣುಗುಣಿಸುವಂತಿತ್ತು. ಸುರಭಿಯ ಚೆಲುವಿನ ಗಾರ್ಡನ್ ಚಿತ್ರ, ನನ್ನ ಬಾಲ್ಯವನ್ನು ನೆನಪಿಸಿತು. ಜೆ.ಯಶಸ್ವಿಯವರು ನೆಪೋಟಿಸಂ ಬಗ್ಗೆ ಬರೆದ ಉ.ದ.ಯ ಎಂಬ ನೀತಿಕಥೆ ಅರ್ಥಪೂರ್ಣವಾಗಿತ್ತು.

ಹೀಗೆ ಡಿಸೆಂಬರ್ ಮಾಸದ ಶೆಟ್ಟಿಗಾರ ವಾಣಿ ಓದಲು ಮನಸ್ಸಿಗೆ ಮುದ ನೀಡಿದೆ. ಒಟ್ಟಿನಲ್ಲಿ ನಮ್ಮ ಪ್ರೀತಿಯ ಶೆಟ್ಟಿಗಾರವಾಣಿ ಪತ್ರಿಕೆಯು ಮಾಸದಿಂದ ಮಾಸಕ್ಕೆ ಬಹಳ ಚೆನ್ನಾಗಿ ಮೂಡಿ ಬರುತ್ತಿದೆ ಎನ್ನುವುದು ನಮಗೆಲ್ಲ ಹೆಮ್ಮೆಯ ವಿಷಯ. ಪತ್ರಿಕೆಯ ವಿನ್ಯಾಸವು ಆಕರ್ಷಕವಾಗಿದೆ. ಪ್ರತಿ ಮಾಸವು ಒಳ್ಳೊಳ್ಳೆಯ ಬರಹಗಳು ಬರುತ್ತಿವೆ. ಶೆಟ್ಟಿಗಾರ ಸಮಾಜದಲ್ಲಿ ನವ ಸಾಹಿತ್ಯಾಸಕ್ತ ಪ್ರತಿಭೆಗಳು ಮೂಡಿಬರುವುದಕ್ಕೆ ನಮ್ಮ ಪತ್ರಿಕೆಯು ಕಾರಣೀಭೂತವಾಗುತ್ತಿದೆ ಎನ್ನುವುದು ಸಂತಸದ ವಿಷಯ. ಶೆಟ್ಟಿಗಾರವಾಣಿಯಲ್ಲಿ ಇನ್ನಷ್ಟು ಮಂದಿ ಬರೆಯಲಿ ಹಾಗೂ ಶೆಟ್ಟಿಗಾರ ಸಮಾಜದ ಎಲ್ಲರೂ ಪತ್ರಿಕೆಯನ್ನು ಓದುವಂತಾಗಲಿ, ಓದಿ ಪ್ರತಿಕ್ರಿಯೆ ನೀಡುವಂತಾಗಲಿ ಎಂದು ನನ್ನ ಹಾರೈಕೆ.

ರಮೇಶ್ ಶೆಟ್ಟಿಗಾರ್
ಮಂಜೇಶ್ವರ






ಯತೀಶ್ ಎಲ್. ಶೆಟ್ಟಿಗಾರ್, ಸಿದ್ಧಕಟ್ಟೆ ,
ವಿದ್ಯಾರಣ್ಯಪುರ, ಬೆಂಗಳೂರು

# ಗದೆ ಪೆಟ್ಟಿಗಿಂತ ಗಾದೆ ಪೆಟ್ಟು ಜೋರು

1. ಹಾಲು ಎಟಕದಿರುವಾಗ ಬೆಕ್ಕೂ ಪ್ರಾಮಾಣಿಕ.
2. ಹಾಡ್ತಾ ಹಾಡ್ತಾ ರಾಗ; ಅಳ್ತಾ ಅಳ್ತಾ ರೋಗ.
3. ಕೊಡುವ ಕೈ ಮೇಲೆ; ಪಡೆಯುವ ಕೈ ಕೆಳಗೆ.
4. ಕುದಿಯುತ್ತಿರುವ ನೀರೇ ಆದರೂ ಬೆಂಕಿಯನ್ನು ಆರಿಸಿ ಬಿಡುತ್ತದೆ.
5. ಬಿಳಿ ದನದ ಹಾಲು ಬಿಳಿ. ಕಪ್ಪು ದನದ ಹಾಲೂ ಬಿಳಿಯೇ.
6. ಕಡಿಮೆ ತಿಳಿದವರು ಹೆಚ್ಚು ಮಾತಾಡುತ್ತಾರೆ. ಹೆಚ್ಚು ತಿಳಿದವರು ಕಡಿಮೆ ಮಾತಾಡುತ್ತಾರೆ.
7. ಕುಳಿತು ತಿಂದರೆ ಬಂಡಿ ಅನ್ನ ಸಾಲದು.
8. ಕಷ್ಟ ಬಂದಾಗ ಕಲ್ಲಿನಂತಾಗು; ಸುಖ ಬಂದಾಗ ಹೂವಿನಂತೆ ಮೃದುವಾಗು.
9. ಖಂಡುಗ ಹಾಲು ಕೆಡಿಸಲು ಒಂದೇ ಒಂದು ಬೊಟ್ಟು ಹುಳಿ ಸಾಕು.
10. ಕಣ್ಣು ಎರಡಾದರೂ ದೃಷ್ಠಿ ಒಂದೇ.
11. ಕಾಸಿಗೆ ಹೋದ ಮರ್ಯಾದೆ ಕೋಟಿ ಕೊಟ್ಟರೂ ಮತ್ತೆ ಸಿಗದು.
12. ಕೊಟ್ಟ ಸಾಲ ಕೇಳದೇ ಹೋಯ್ತು; ಹೋಗದೆ ಬರದೆ ಸಂಬಂಧ ಹೋಯ್ತು.
13. ಗುಣ ಹೀನನ ಸಿರಿತನಕ್ಕಿಂತ ಗುಣವಂತನ ಬಡತನವೇ ಲೇಸು.
14. ಗಡಿಗೆ ಬಾಯಿ ಮುಚ್ಚಿಸಬಹುದು; ಜನರ ಬಾಯನ್ನಲ್ಲ.
15. ಗೆಲುವು ತಲೆಗೇರಬಾರದು; ಸೋಲು ಎದೆಗಿಳಿಯಬಾರದು.
16. ಗೂಡು ಬಿಟ್ಟರೂ ಗುರಿ ಬಿಡಬಾರದು.
17. ಕಾಲ ಮತ್ತು ಸಮುದ್ರದ ಅಲೆಗಳು ಯಾರನ್ನೂ ಕಾಯುವುದಿಲ್ಲ.
18. ಅರಿವಿನ ಮೂಲ ಆಚಾರ್ಯ.
19. ಮಹಿಳೆಯರು ಮರೆಯುವುದಿಲ್ಲ; ಪುರುಷರು ನೆನಪಿಡುವುದಿಲ್ಲ.
20. ಮನೆಗೊಂದು ಮಗು ಚಂದ; ಗಿಡಕ್ಕೆ ಹೂ ಚಂದ.
21. ಕೇಳಿದ್ದೆಲ್ಲಾ ನಂಬಬಾರದು; ತಿಳಿದದ್ದೆಲ್ಲಾ ಹೇಳಬಾರದು.
22. ಕಿಡಿ ಸಣ್ಣದಾದರೂ ಕಾಡನ್ನೆಲ್ಲಾ ಸುಡುತ್ತದೆ.
23. ಗುಣ ತಿಳಿದು ಗೆಳೆತನ ಮಾಡಬೇಕು.
24. ಗತಿ ಕೆಟ್ಟರೂ ಮತಿ ಕೆಡಬಾರದು.
25. ಅವಕಾಶ ಬಂದಾಗ ಕಣ್ಮುಚ್ಚಿ ಕುಳಿತುಕೊಳ್ಳಬೇಡ.



(ಸಂಗ್ರಹ)
ಚಂದ್ರಶೇಖರ ಶೆಟ್ಟಿಗಾರ್ ಪಿ.
ಆರ್.ಟಿ. ನಗರ, ಬೆಂಗಳೂರು

# ಶೆಟ್ಟಿಗಾರರ ಕಲಾ ಯಾನ

ಗಂಡು ಕಲೆ ಯಕ್ಷಗಾನ ಲೋಕದಲ್ಲಿ ಮಿನುಗುತಿರುವ ತುಳುನಾಡಿನ ಪ್ರಖ್ಯಾತ ಹಾಸ್ಯಗಾರ 'ಕುಸಾಲ್ದ ಗುರ್ಕಾರೆ' ದಿನೇಶ್ ಶೆಟ್ಟಿಗಾರ್ ಕೊಡಪದವು.

ಯಾವುದೇ ಕಲಾವಿದನಾಗಲು ತುಂಬಾ ವಿದ್ಯೆ ಬೇಕಂತಿಲ್ಲ, ಪ್ರತಿಭಾವಂತ ಕಲಾವಿದನಿಗೆ ಯೋಗ - ಭಾಗ್ಯ, ಸರಸ್ವತಿ ತಾಯಿಯ ಅನುಗ್ರಹ ಹಾಗೂ ತಂದೆ -ತಾಯಿಯ ಆಶೀರ್ವಾದ ಇದ್ದರೆ ಸಾಕು. ಹಾಗೆಯೇ ಒಬ್ಬ ಮನುಷ್ಯನಿಗೆ ಎಷ್ಟು ಹಣ ಬಲವಿದ್ದರೂ ಎಷ್ಟೋ ಲಕ್ಷಾಂತರ ಹಣವನ್ನು ಕೊಟ್ಟು ಅತ್ಯುತ್ತಮ ಕಲಾವಿದನಾಗಲು ಅಸಾಧ್ಯ. ಅವರವರ ಬುದ್ಧಿವಂತಿಕೆ ಹಾಗೂ ಅವರು ಆಯ್ಕೆಗೊಂಡ ನಿರ್ದಿಷ್ಟ ಕಲೆಯಲ್ಲಿ ಆಸಕ್ತಿಯಿಂದ ತೊಡಗಿದ್ದರೆ ಮಾತ್ರ ಅವನೊಬ್ಬ ಅತ್ಯುತ್ತಮ ಕಲಾವಿದನಾಗಲು ಸಾಧ್ಯ ಎಂದು ನನ್ನ ಅಭಿಪ್ರಾಯ.


Photo Credits: Comedy Company Mangalore



ಗಂಡು ಕಲೆ ಯಕ್ಷಗಾನ ಲೋಕದಲ್ಲಿ ತುಳುನಾಡಿನ ಪ್ರಖ್ಯಾತ ಹಾಸ್ಯಗಾರರಾಗಿ ಮಿನುಗುತಿರುವ ಶೆಟ್ಟಿಗಾರ್ ಸಮಾಜದ ಸಾಲಿಗೆ ಸೇರಿದ ‹ಕುಸಾಲ್ದ ಗುರ್ಕಾರೆ› ಎಂಬ ಬಿರುದನ್ನು ಪಡೆದಿರುವ ದಿನೇಶ್ ಶೆಟ್ಟಿಗಾರ್ ಕೊಡಪದವು ಒಬ್ಬರು. ಕೊಡಪದವುರವರ ತಂದೆ ಈಶ್ವರ್ ಶೆಟ್ಟಿಗಾರ್ ಮತ್ತು ತಾಯಿ ಲೀಲಾವತಿ ದಂಪತಿಗಳ ಹೆಮ್ಮೆಯ ಪುತ್ರ. ಕೊಡಪದವು ಅವರ ಬದುಕಿಗೆ ಉಸಿರಾಗಿರುವ ಅವರ ಪ್ರೀತಿಯ ಧರ್ಮಪತ್ನಿ.

ತಮ್ಮ ವಿಟ್ಲದ ಕೊಡಪದವು ಊರಿನಲ್ಲಿ ಏಳನೇ ತರಗತಿಯವರೆಗೆ ವಿದ್ಯಾಭ್ಯಾಸ ಮುಗಿಸಿ. ಯಕ್ಷಗಾನ ಕ್ಷೇತ್ರದಲ್ಲಿ ಹೆಸರು ಗಳಿಸಿದ ಗುರುಗಳಾದ ರತ್ನಾಕರ ಹೆಗ್ಗಡೆ ಪುತ್ತೂರು ಮತ್ತು ಸಬ್ಬಣ್ಣ ಕೋಡಿ ಕೃಷ್ಣ ಭಟ್ ಇವರುಗಳ ಗರಡಿಯಲ್ಲಿ ಬೆಳೆದಿದ್ದರಿಂದ ಕೊಡಪದವುರವರು ಯಕ್ಷಗಾನ ಕ್ಷೇತ್ರದಲ್ಲಿ ಇಷ್ಟು ಎತ್ತರಕ್ಕೆ ಬೆಳೆಯಲು ಕಾರಣ ಎಂದು ನನ್ನ ಸಂದರ್ಶನದಲ್ಲಿ ಸಂತಸದಿಂದ ತಿಳಿಸಿದ್ದಾರೆ.

ದಿನೇಶ್ ಶೆಟ್ಟಿಗಾರ್ ಕೊಡಪದವುರವರ ಕಲಾ ಯಾನದ ಬದುಕನ್ನೇ ವೃತ್ತಿಯಾಗಿ, ತದನಂತರ ಸುಂಕದಕಟ್ಟೆ ಮೇಳ, ಮಂಗಳಾದೇವಿ, ಕದ್ರಿ ಮೇಳ, ಬಾಚಕೆರೆ ಮೇಳ, ಸಸಿಹಿತ್ಲು ಶ್ರೀ ಭಗವತಿ ಮೇಳ ಹಾಗೂ ಬೇರೆ ಬೇರೆ ತಿರುಗಾಟ ಮೇಳದಲ್ಲಿ ಕೂಡ ಯಕ್ಷಗಾನ ಸೇವೆಯನ್ನು ಮಾಡಿದ ಕೀರ್ತಿ ಸಲ್ಲುತ್ತದೆ.

ಕಳೆದ ಸುಮಾರು 8 ವರ್ಷದಿಂದ ಇಲ್ಲಿಯವರೆಗೆ ಮುಲ್ಕಿ ಶ್ರೀ ಕ್ಷೇತ್ರ ಬಪ್ಪನಾಡು ದುರ್ಗಾಪರಮೇಶ್ವರಿ ಮೇಳದಲ್ಲಿ ಪ್ರಮುಖ ಹಾಸ್ಯಗಾರರಾಗಿ ಸಾವಿರಾರು ಯಕ್ಷಗಾನ ಅಭಿಮಾನಿಗಳ ಹೃದಯವನ್ನು ಗೆದ್ದು ಯಕ್ಷಗಾನ ಕ್ಷೇತ್ರದಲ್ಲಿ ಹೆಸರನ್ನು ಉಳಿಸಿ-ಬೆಳೆಸಿದ್ದಾರೆ.

ಅಭಿಮನ್ಯು, ಚಂಡ, ಮುಂಡರು, ಸುಧನ್ವ, ಬಬ್ರುವಾಹನ, ಕಮಲಧ್ವಜ, ಕೃಷ್ಣ, ಬಲರಾಮ, ಪ್ರಹ್ಲಾದ, ಲೋಹಿತಾಶ್ವ, ಹಾಸ್ಯ ಪಾತ್ರದಲ್ಲಿ ಮಾಲಿನಿ ದೂತ, ವಿದ್ಯುನ್ಮಾಲಿದೂತ, ಚಿಕ್ಕ ದಾರುಕ, ಮಕರಂದ, ಪ್ರಾತಿಕಾಮಿ, ನಾರದ, ಇತ್ತೀಚೆಗೆ ನಡೆದ 'ನಳದಮಯಂತಿ' ತುಳು ಪ್ರಸಂಗದಲ್ಲಿ ಬಾಹುಕನ ಪಾತ್ರದಲ್ಲಿ ಯಕ್ಷ ಅಭಿಮಾನಿಗಳ ಮೆಚ್ಚುಗೆ ಪಡೆದಿದ್ದಾರೆ ಹಾಗೂ ಕೆಲವು ಪುರಾಣ ಪ್ರಸಂಗಗಳಲ್ಲಿ ಕೂಡ ಬೇರೆ ಬೇರೆ ರೀತಿಯ ಯಕ್ಷಗಾನ ಪಾತ್ರದ ಮೂಲಕ ಮಿಂಚಿದ್ದಾರೆ.

ಹೆಸರು ಗಳಿಸಿದ ತುಳು ಪ್ರಸಂಗಗಳಾದ ಬನತ ಬಂಗಾರ್, ನರಸಿಂಹ, ಬನತ ಬಬ್ಬರ್ಯೆ, ಪೈಕುಲ, ನಿಧಿ ನಿರ್ಮಲ, ಚಾವುಂಡರಾಯ, ಬಾಲೆ ಭಗವಂತನ ಗುಡ್ಡಪ್ಪ ಇನ್ನು ಹಲವು ಹೊಸ ಹೊಸ ಪ್ರಸಂಗಗಳ ಯಕ್ಷ-ಕಲೆಯಲ್ಲಿ ಮಿಂಚಿದ್ದಾರೆ. ಕುಸಾಲ್ದ ಗುರ್ಕಾರೆ, ಯಕ್ಷ-ಮಾಣಿಕ್ಯ, ಹಾಸ್ಯದರಸು ಹೀಗೆ ಹಲವಾರು ಗೌರವ ಪ್ರಶಸ್ತಿ ಸನ್ಮಾನಗಳು ವಿವಿಧ ಸಂಘ ಸಂಸ್ಥೆಗಳಿಂದ ಬಂದಿರುತ್ತದೆ.

ಇತ್ತೀಚೆಗೆ ತುಳು ಹಾಸ್ಯಭರಿತ 'ತೆಲಿಕೆ ತೇಟ್ಲ' ಎಂಬ ತಂಡ ಕಟ್ಟಿ ಯಕ್ಷ ಹಾಸ್ಯ ವೈಭವ ಮತ್ತು ನಮ್ಮ ಕುಡ್ಲ ವಾಹಿನಿಯಲ್ಲಿ ಮೂಡಿಬರುವ ಯಕ್ಷ ತೆಲಿಕೆ ಎನ್ನುವ ಸಾಮಾಜಿಕ ಕಳಕಳಿಯಿರುವಂತಹ ಹಾಸ್ಯ ಪ್ರಸಂಗಗಳ ಜವಾಬ್ದಾರಿಯನ್ನು ಕೂಡ ನಿರ್ವಹಿಸಿ ಶೆಟ್ಟಿಗಾರ್ ಸಮಾಜದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಕೊರೊನ ಸಂದರ್ಭದಲ್ಲಿ ಸುಮಾರು 25ಕ್ಕಿಂತಲೂ ಹೆಚ್ಚು ಯಕ್ಷಗಾನ ಕಲಾವಿದರ ಕುಟುಂಬಕ್ಕೆ ಆಹಾರದ ಕಿಟ್ ವಿತರಣೆಯ ನೆರವನ್ನು ಮಾಡುವ ಮೂಲಕ ಕಲಾವಿದರಿಗೆ ಆತ್ಮ ವಿಶ್ವಾಸ ಮೂಡಿಸುವಲ್ಲಿ ಯಶಸ್ವಿಯಾಗಿ ಸಾಮಾಜಿಕವಾಗಿ ಕೆಲಸವನ್ನು ಮಾಡಿದ್ದಾರೆ. ಯಕ್ಷಗಾನ ಹಾಸ್ಯ ಕಲಾವಿದರ ಒಕ್ಕೂಟ ಮಾಡಿ ‹ಆಟದ ಆಯೊನ› ವಿಶೇಷ ಕಾರ್ಯಕ್ರಮವನ್ನು ಮಾಡಿ ಯಕ್ಷಗಾನ ಲೋಕದಲ್ಲಿ ಮಿಂಚಿದ್ದಾರೆ.

ಆರ್ಯಭಟ ಕಲ್ಚರಲ್ ಆರ್ಗನೈಷೇಸನ್ (ರಿ) ಸಂಸ್ಥೆ ರಾಜಧಾನಿ ಬೆಂಗಳೂರಿನಲ್ಲಿ ಜೂನ್ 2024, ರವಿವಾರ, ರವೀಂದ್ರ ಕಲಾಕ್ಷೇತ್ರದಲ್ಲಿ ಆರ್ಯಭಟ ಪ್ರಶಸ್ತಿಯನ್ನು ಗಣ್ಯಾತಿಗಣ್ಯರ ಸಮ್ಮುಖದಲ್ಲಿ 'ಆರ್ಯಭಟ ಅಂತರಾಷ್ಟ್ರೀಯ ಪ್ರಶಸ್ತಿ 2024' ಪ್ರತಿಷ್ಠಿತ ಗೌರವವನ್ನು ಸ್ವೀಕರಿಸಿದ್ದಾರೆ.

ಇನ್ನೂ ಹಲವಾರು ತುಳು -ಕನ್ನಡ, ನಾಟಕ, ಸಿನಿಮಾಗಳಲ್ಲಿ ಕೂಡ ನಟನೆ ಮಾಡಿ ಪಾತ್ರಕ್ಕೆ ತಕ್ಕ ನ್ಯಾಯ ಒದಗಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಶೆಟ್ಟಿಗಾರ್ ಸಮಾಜದ ಹೆಗ್ಗಳಿಕೆ ಮತ್ತು ಕೀರ್ತಿಯನ್ನು ಯಕ್ಷಗಾನ ಕ್ಷೇತ್ರದಲ್ಲಿ ತನ್ನದೇ ಶೈಲಿಯಲ್ಲಿ ಕಲಾ ಚಾತುರ್ಯದ ಮೂಲಕ ಯಕ್ಷಗಾನ ಹಾಸ್ಯ ಕಲಾವಿದರಾಗಿ ಪ್ರಖ್ಯಾತಿಯನ್ನು ಪಡೆದಂತಹ ದಿನೇಶ್ ಶೆಟ್ಟಿಗಾರ್ ಕೊಡಪದವು ಅವರು ಮತ್ತಷ್ಟು ಯಕ್ಷಗಾನ ಲೋಕದಲ್ಲಿ ಉನ್ನತ ಸಾಧನೆಯನ್ನು ಮಾಡಿ ಸಮಾಜಕ್ಕೆ ಹಾಗೂ ಅವರ ಕುಟುಂಬದವರ ಹೆಗ್ಗಳಿಕೆಗೆ ಪಾತ್ರರಾಗಿ, ತುಳುನಾಡಿನ ದೈವ ದೇವರುಗಳು ಆರೋಗ್ಯ ಭಾಗ್ಯ, ಸಂಸಾರದಲ್ಲಿ ಸುಖ ಸಂಪತ್ತು ಕೊಟ್ಟು ಕರುಣಿಸಲಿ ಎಂದು ಹಾರೈಸುತ್ತೇನೆ.



**ಯಾದವ ಶೆಟ್ಟಿಗಾರ್ ಕಲ್ಲಾಪು, ಬೆಂಗಳೂರು**

# ಕರೆಗಳು ಸಾ...ರ್ ಕರೆಗಳು

"ಏಕೇ, ಈ ಮೌನ, ಕರೆದರು ಕೇಳದೆ ಸುಂದರನೇ" ಹಾಡನ್ನು ಕೇಳ್ತಾ ಇದ್ದೆ. ತಲೆ ಫೋನ್(Heddu Phone) ನಲ್ಲಿ ಮತ್ತು ಅತಿ ಹೆಚ್ಚು ವಾಲ್ಯೂಮ್ ನಲ್ಲಿ ಸಹ. ಮುಂದಿನ ಹಾಡು ಇದ್ದಿದ್ದು "ಯಾರೇ ಕೂಗಾಡಲಿ, ಇಲ್ಲ ಊರೇ ಹೋರಾಡಲಿ, ನಿನ್ನ ನೆಮ್ಮದಿಗೆ ಭಂಗ ಇಲ್ಲ" ನನಗೆ ಅರಿವೇ ಇಲ್ಲ...

ಅಷ್ಟರಲ್ಲಿ, ಯಾರೋ ತೀರ ಹತ್ತಿರದಿಂದಲೇ ಕರೆದ ಹಾಗೆ ಅನಿಸಿತು. ಹಾಗೆಯೆ ಒಂದು ಕೈ ಕಣ್ಣ ಮುಂದೆ ಬರ್ತಾ ಇತ್ತು. "ಏನ್ರಿ? ಅಷ್ಟೊಂದು ಸಲ ಕರೆ ಗಂಟೆ(ಕಾಲಿಂಗ್ ಬೆಲ್) ಆದ್ರೂ ಕೇಳಿಸಿಲ್ಲ?" ನಿಮ್ಮ ಊಹೆ ಸರಿ ಇದೆ, ನನ್ನ ಧರ್ಮ ಪತ್ನಿ ನನ್ನನ್ನು ತರಾಟೆಗೆ ತಗೋತಾ ಇದ್ದಳು. ಆಕೆಗೆ ನನ್ನ ಶ್ರವಣ ಶಕ್ತಿ ಬಗ್ಗೆ ಭಾರಿ ಸಂಶಯ ಬಂದಿದೆ. ಬುದ್ಧನ ಆಧುನಿಕ ಸಂದೇಶ ಹೀಗೆ ಇರಬಹುದಾ. ಸಂಶಯವೇ ಎಲ್ಲ ಬಿಕ್ಕಟ್ಟಿಗೆ ಮೂಲ!



AI generated image: No photo credits required

ಯಾರಪ್ಪಾ ಅದು ಅಂತ ಬಾಗಿಲನ್ನು ತೆರೆದೆ. ಪಂಗಡವಾಗಿ ಬಂದ ಅವರು ನನಗೆ ಮಾತಾಡುವ ಅವಕಾಶ ಕೊಟ್ಟೇ ಇಲ್ಲ, ಸಾ...ರ್ ನಮ್ಮ ಆಶ್ರಮಕ್ಕೆ ಸಹಾಯ ಮಾಡಿ ಸಾ...ರ್ . ಬಟ್ಟೆ ಕೊಡ್ಲಾ ಅಂತ ಕೇಳಿದ್ರೆ, ಇಲ್ಲ ಸಾರ್ ಅಂತ ಖಡಕ್ ಉತ್ತರ.

ಅಷ್ಟರಲ್ಲಿ ನಂಗೆ ದೂರವಾಣಿ ಕರೆ ಬರತ್ತೆ. "ರೀ ಕಾಲ್ ನಲ್ಲಿ ಇದ್ದೀನಿ, ಮತ್ತೆ ಬನ್ನಿ" ಅಂತ ಕಳಿಸಿ ಬಿಟ್ಟೆ . ನಾವು ಕನ್ನಡದ "ದೂರವಾಣಿ" ಪದ ಬಳಸುವುದು ಅಪರೂಪವಾಗಿದೆ. ಎಷ್ಟೊಂದು ಸವಿ ನುಡಿ! ಆದ್ರೆ, ಒಂದು ಸಂದೇಹ, ನಮ್ಮ ಹತ್ತಿರದ ವಾಣಿ ಕರೆ ಮಾಡಿದರೆ, ಅದೂನೂ ದೂರ...ವಾಣಿ?

ಬಂದಿದ್ದ ಕರೆ ಅನವಶ್ಯಕ (spam & scam) ಅಂತ ಗೊತ್ತಾಯಿತು. "ನಿಮ್ಮ ಫೋನ್ ನಿಂದ ಅನುಮಾನಾಸ್ಪದ ಚಟುವಟಿಕೆ ನಡೆದಿದೆ ಮತ್ತು ಟೆಲಿಕಾಂನವರು ಫೋನ್ ರದ್ದು ಮಾಡುತ್ತಾರೆ, ಬಚಾವ್ ಮಾಡಲು 9 ನ್ನು ಒತ್ತಿ" ಎಂದನು ಆ ಕಡೆಯಿಂದ ಮೋಸಗಾರ(ಕಲೆಗಾರ). ನಾನು ಕರೆಯನ್ನು ಹೋಲ್ಡ್ ಗೆ ಹಾಕಿ, ಮತ್ತೆ ನನ್ನ "ಕೂಗಾಡೋ" ಹಾಡು ಮುಂದುವರಿಸಿದೆ. ಸ್ವಲ್ಪ ಹೊತಿನಲ್ಲಿ ಕರೆ ಅದಾಗಿಯೇ ಕಟ್ ಆಗಿದೆ. ನನಗೆ ಒಳಗೊಳಗೆ ಏನೋ ಸಂತೋಷ. ಯಾಕಂದ್ರೆ ಆ ಕಡೆ ಒಂಬತ್ತು ಒಂಬತ್ತು ತೋಳ ಹಳ್ಳಕ್ಕೆ ಬಿತ್ತು ಅಂದುಕೊಂಡಿರಬಹುದು. ರೋಬೊ(Robo) ಕರೆಗಳಿಗೆ ಯಾವ ರೀತಿಯ ಶಿಕ್ಷೆಯೂ ಇಲ್ಲವಲ್ಲ!

ಗ್ರಾಹಕ ಸೇವೆ (Customer Service) ಗಳೆಲ್ಲ, ಗ್ರಾಹಕರ ಸಹಾಯಕ್ಕೆ ಇರಬೇಕು . ಆದ್ರೆ ಸಹಾಯದ ಹೆಸರಲ್ಲಿ ಸಮಯ ವ್ಯರ್ಥ ಮಾಡೋದೇ ಜಾಸ್ತಿ. ನಮಗೆ ಎಲ್ಲ ಅಂಕೆಗಳನ್ನ ಮರೆತು ಹೋಗದೇ ಇರುವಂತೆ ಮಾಡುವುದೇ ಇವರ ಉದ್ದೇಶ ಇರಬಹುದೇನೋ !!! ತುಂಬ ಸಂದರ್ಭಗಳಲ್ಲಿ ಅವರು ಕರೆ ಕಾಯ್ದಿರಿಸುತ್ತಾರೆ (on Hold). ಅವರು ನಮಗೆ ಈ ತರ ಕಾಯ್ದಿರಿಸಿ ಕಾಫಿ ಕುಡಿಲಿಕ್ಕೋ, ಇಲ್ಲ ಊಟ ಮಾಡುವುದಕ್ಕೋ, ಸಿನಿಮಾ ನೋಡುವುದಕ್ಕೋ ಹೋಗಬಹುದು.

ಆಗ ನಾವು ಸಹ OTT ನಲ್ಲಿ ಸೀರಿಯಲ್ ನ ಒಂದು ಸೀಸನ್ ಆರಂಭಿಸಿ ಮುಗಿಸಿದ್ರು, ಕರೆ ಇನ್ನೂ hold ನಲ್ಲೇ ಇರುತ್ತೆ. ಆ ಕಡೆ "ನಲ್ಲೆ" ಇರುತಾಳೋ ಇಲ್ಲ ಗೊತ್ತಾಗೊಲ್ಲ! ಆದ್ರೆ ಇನ್ನೊಂದು OTT ಸೀಸನ್ ಸಹ ಶುರು ಮಾಡಬಹುದು. ಮಧ್ಯ, ಮದ್ಯ(?) ದಲ್ಲಿ, ಸಾರೀ ಅಥವಾ ಥ್ಯಾಂಕ್ಸ್ ಅಂತ ಹೇಳಿ ನಿಮಗೆ ಫೋನ್ ನಲ್ಲೇ ಇರೋ ತರ ಮಾಡುತ್ತಾರೆ.

ಅವರು ನಮ್ಮ ಸಹನಾ ಶಕ್ತಿ ಪರಿಶೀಲಿಸುತ್ತಾರೆ ಅಥವಾ ನಾವೇ ಕರೆಯನ್ನು ಮುಕ್ತಾಯ ಮಾಡಬಹುದು ಎಂಬ ಅಪೇಕ್ಷೆ ಅವರಿಗೆ. ಅವರ ಉದ್ದೇಶ ಕಾಲಹರಣ ಇರಬಹುದು. ನಾನು ಇದನ್ನೇ "ತಮಸ್ಸು/ತಪಸ್ಸು ತಂತ್ರಗಾರಿಕೆ ಅಂತ ಹೆಸರು ಇಟ್ಟಿದೀನಿ.

ಸುಮಾರಾಗಿ ಹಣಕಾಸು (Finance ) ಮತ್ತುಆಸ್ತಿ (real estate ) ಬಗ್ಗೆ ಕರೆಗಳು ಎಲ್ಲರಿಗೂ ಬರುವುದು ಸಾಮಾನ್ಯ. ಒಬ್ಬರು ಸಾಲ ಕೊಡತೀವಿ ಅಂತ ಕರೆ ಮಾಡಿದರೆ, ತಕ್ಷಣ real estate ಅವರು ಮನೆ ಗೃಹ ಪ್ರವೇಶಕ್ಕೆ ರೆಡಿ ತೆಗೊಳ್ಳಿ ಅಂತಾರೆ. ಸಾಲ ಸೌಲಭ್ಯ ಸಹ ಇದೆ ಅಂತ ನಿಮ್ಮನ್ನು ಉಬ್ಬಿಸ್ತಾರೆ. ನಂಗೆ ಸಂಶಯ, ಇವರು ಇಬ್ಬರು ಒಟ್ಟಿಗೆ ಒಂದೇ ಕಡೆನಿಂದಲೇ ಮಾಡ್ತಾ ಇರಬೇಕು ಅಂತ. ಏನಂತೀರಾ? ಈ ದಿನಗಳಲ್ಲಿ ಮನೆಯಿಂದ ಕೆಲಸ ಮಾಡುತ್ತಾರೆ ಅಲ್ವ, ಗಂಡ ಮತ್ತು ಹೆಂಡ್ತಿ ಇಬ್ಬರೂ ಒಂದೇ ಮನೆಯಿಂದ ಕರೆ ಮಾಡಿರಬಹುದಾ? ಅದೇನೇ ಇರಲಿ ಅವರಿಗೂ ಹೊಟ್ಟೆ ಪಾಡು ಅಲ್ವ !!! ಆದರೂ ನಂಗೇ ಈ ಥರ ಕರೆ ಬೇಕಾಗಿಲ್ಲ ಅಂದ್ರು, ದಿನಾ ಬರ್ತನೆ ಇರತ್ತೆ, ಚಿತ್ರ ಗುಪ್ತನಿಗೂ ಲೆಕ್ಕಾಚಾರ ಇಡಲಿಕ್ಕೆ ಹೇಳಿದರು ಆಗೋಲ್ಲ !

ನಾನು ಬಹಳ ವರ್ಷಗಳ ಹಿಂದೆ ಹೊರ ದೇಶದಲ್ಲಿ ಕೆಲಸದ ನಿಮಿತ್ತ ಇದ್ದಾಗಿನ ಕಥೆ. ಒಂದು ಭಾನುವಾರ ಮಧ್ಯಾಹ್ನ ಇನ್ನೇನು ಊಟಕ್ಕೆ ಕುಳಿತುಕೊಳ್ಳುವಾಗ, ನಮ್ಮ Client(ಗ್ರಾಹಕ) ಮ್ಯಾನೇಜರ್ ಅವ್ರಿಂದ ಕರೆ ಬಂತು. ಹೊರದೇಶಗಳಲ್ಲಿ ವಾರಾಂತ್ಯದಲ್ಲಿ ಆಫೀಸ್ ಕರೆಗಳು ಬರುವುದು ಮತ್ತೆ ನಾವು ಕರೆ ಮಾಡುವುದು ಅಪರೂಪ, ಮತ್ತೆ ಕರೆ ಬಂದ್ರೆ, ಅದು ಸ್ವಲ್ಪ ತುರ್ತು ವಿಚಾರ ಅಂತಾನೆ ಅರ್ಥ. ಆದರೆ ನಮ್ಮಲ್ಲಿ ವಾರಾಂತ್ಯದಲ್ಲೇ ಜಾಸ್ತಿ ಕೆಲಸವಾಗುತ್ತಿದೆಯೇ?

ನನಗೆ ನೂರಾರು ಯೋಚನೆ(ಚಿಂತೆ) ಶುರುವಾಯಿತು. ಎಲ್ಲೆಲ್ಲಿ, ಎಷ್ಟೊಂದು, ಯಾವಾಗ ಎಡವಟ್ಟು ಮಾಡಿದ್ದೇವೆ ನಾವುಗಳು ಅಂತ.

ನಾನು ಏನನ್ನು ಹೇಳೋ ಮೊದಲೇ ಅವರು, ರಾಮ್ ನೀವು ಕರೆ ಮಾಡಿದ್ರಲ್ಲ ಸ್ವಲ್ಪ ಹಿಂದೆ, ನಾನೊಂದು ಪಾರ್ಟಿನಲ್ಲಿ ಇದ್ದೀನಿ, ನಿಮ್ಮ ಕಂಪನಿಯ ಎಲ್ಲ ಬಿಲ್ಲುಗಳು 3-2 ದಿನದಲ್ಲೇ ಪಾವತಿಯಾಗುತ್ತೆ ಅಂದ್ರು. ನಿಮ್ಮ ಮ್ಯಾನೇಜರ್ ಗು ಹೇಳಿ ಅಂತ ಫೋನ್ ಇಟ್ಟೇ ಬಿಟ್ರು. ಅವರ ಧ್ವನಿ ಮತ್ತು ಹಿಂದಿನ ಶಬ್ದದಲ್ಲೇ ಅಂದಾಜು ಮಾಡಬಹುದು ಪಾರ್ಟಿ ಜೋರಾಗಿ ಇರುವುದು ಅಂತೂ ನಿಶ್ಚಿತ.

ಆದ್ರೆ ನಂಗೆ ಇನ್ನು ಆಶ್ಚರ್ಯ, ನಾನಂತೂ ಫೋನ್ ಮಾಡಿಲ್ಲ. ಫೋನ್ ಕರೆಗಳನ್ನು ನೋಡಿದೆ. ಹೌದು, ಒಂದು ಕರೆ ಹೋಗಿದೆ ಅವರಿಗೆ.

ಯಾರಾದ್ರೂ ನನ್ನ ಫೋನ್ ತೆಗೆದಿದ್ರ? ಮೂಲೆನಿಂದ ಒಬ್ಬರ ದಂತಪಂಕ್ತಿ ಪ್ರದರ್ಶನ ಮಾಡಿದ್ದರಿಂದ ಸುಲಭವಾಗೇ ಸಿಕ್ಕೇ ಹಾಕ್ಕೊಂಡ್ರು ಅನ್ನಿ. ಅದು ನನ್ನ 3 ವರ್ಷದ ಸುಪುತ್ರ, ಏನೇನೊ ಒತ್ತಿದ್ದ, ಮತ್ತೆ ಒಂದು ಕರೆ ಹೋಗೇ ಬಿಟ್ಟಿತು, clientಗೆ. ಏನೆ

ಆಗಲಿ, ಅದೊಂದು ಲಾಭದಾಯಕವಾದ ಕರೆಯೇ ಆಗಿತ್ತು ಅನ್ನಿ. ದೂರದಿಂದ "ಮಾಮರವೆಲ್ಲೋ ಕೋಗಿಲೆ ಎಲ್ಲೊ" ಹಾಡು ಕೇಳಿ ಬಂತು.

ಇತ್ತೀಚಿಗೆ ನಾನು ಫೋನ್ ನಲ್ಲಿ ನಿಶ್ಶಬ್ದದ (Silent ) ಕರೆ ಸೌಲಭ್ಯ ಬಳಸಿದ್ದೇನಿ. ನಿಶ್ಶಬ್ದದ (Silent ) ಕರೆಗಳು ಅಂದ್ರೆ, ಧ್ವನಿ (Volume ) ಯನ್ನು ಫೋನ್ ನಲ್ಲಿ ತೆಗೆದು ಬಿಟ್ರೆ, ಅಥವಾ Vibrate ನಲ್ಲಿ ಇಡೋದೆನಲ್ಲ, ನಿಮ್ಮ ಸಂಪರ್ಕ(contact) ಅಲ್ಲದೆ ಇದ್ರೆ, ಫೋನ್ ರಿಂಗ್ ಆಗೋದೇ ಇಲ್ಲ, ಆಮೇಲೆ ಬೇಕಾದ್ರೆ, ನೀವು ಅವರಿಗೆ ಫೋನ್ ಮಾಡಬಹುದು(missed ಕರೆ ಇಂದ). ಆದರೆ ಯಾಕೋ ನನ್ನ ಫೋನ್ ಗೆ ಈ ತರದ ಕರೆ ಇಲ್ಲದೆ ಬೋರ್ ಆಗಿರಬಹುದು ಅನಿಸ್ತಾ ಇದೆ.

ನೆನಪಿದೆಯಾ, ಸ್ಥಿರ ದೂರವಾಣಿ (Land line) ಕಾಲದಲ್ಲಿ ಫೋನ್ receiver ಎತ್ತಿ ಇಟ್ರೆ ಅದೇ ನಿಶ್ಶಬ್ದದ ಕರೆ! ಯಾರೇ ಕರೆ ಮಾಡಿದರು ಅವರು ಬಿಡುವಿಲ್ಲದವರು(ಬ್ಯುಸಿ).

ಭವಿಷ್ಯದಲ್ಲಿ ಎಲ್ಲಾದ್ರೂ ಫೋನ್ ಸ್ವಯಂಚಾಲಿತವಾಗಿ(Automatic) ಸ್ವೀಕರಿಸಿ ಅದೇ ಮಾತಾಡಿದರೆ ಭಾರಿ ಕಷ್ಟ ಉಂಟು ಮಾರಾಯರೆ. ಈ ಜನಕ್ಕೆ ಕೆಲಸ ಇಲ್ಲ ಆದ್ರೂ ಫೋನ್ ತೆಗೊಳೋಲ್ಲ, ಏನಾದ್ರು, ಅವರಿಗೆ ಸಂಸ್ಕೃತದಲ್ಲಿ ಸಂದೇಶ ಕೊಡಬೇಕಾ ಅಂದ್ರೆ ?

ನನಗೆ ಒಂದು ಕರೆ ಬರ್ತಾ ಇದೆ ನಂಗೆ. ನನ್ನ ಹೆಂಡತಿಯಿಂದ. ಆದರೆ ಇಬ್ಬರು ಮನೆಯಲ್ಲೇ ಇದ್ದೀವಿ. ಏನೇನೊ ಯೋಚಿಸಬೇಡಿ ಮಾರಾಯರೆ. ಆದರೆ, ನಿಮ್ಮ ಊಹೆ ಸರಿ ಇದೆ, ನಾನು ಹಾಡು ಕೇಳ್ತಾ ಇದ್ದೆ.

ಏನ್ರಿ? ನಾನು ಇಲ್ಲೇ ನಿಮ್ಮ ಪಕ್ಕದಲ್ಲೇ ಇದ್ದೀನಿ, ಅಷ್ಟೊಂದು ಸಲ ಕರೆದೆ, ಕಿವಿ ಕೇಳಿಸಿಲ್ವ?

ನಾಳೆ ನಾನು ಕಿವಿ(ENT) ವೈದರನ್ನು ಭೇಟಿ ಮಾಡಿ ಶ್ರವಣ ಶಕ್ತಿ ಪರೀಕ್ಷಿಸಬೇಕು. ನನಗೆ ಶುಭ ಹಾರೈಸಿ.

ಹಾಗೆಯೇ, ನಿಮಗೆ ಹೊಸ ವರ್ಷದ ಹಾರ್ದಿಕ ಶುಭಾಶಯಗಳು!



ರಾಮಕೃಷ್ಣ ಸಾಲಿಕೇರಿ
ಬೆಂಗಳೂರು

# ಆಯಿಸ್ಟರ್ ಅಣಬೆಯ ಬೆಳೆಯ ವಿವಿಧ ಹಂತಗಳು



1 ಸ್ಟೆರಲೈಸ್ ಮಾಡಿದ ಬತ್ತದ ಹುಲ್ಲು, ಗೋಧಿ ಹುಲ್ಲು, ಮೆಕ್ಕೆಜೋಳದ ಹುಲ್ಲು, ಹತ್ತಿ ಹೊಟ್ಟುಗಳು, ಮತ್ತು ಇತ್ಯಾದಿಗಳಲ್ಲಿ ಒಂದು.



2 ಆಯಿಸ್ಟಾರ್ ಅಣಬೆಯ ಬೀಜಗಳನ್ನು ಸ್ಥಳೀಯ ತೋಟಗಾರಿಕೆ ಇಲಾಖೆಯನ್ನು ಸಂಪರ್ಕಿಸಿ ನಿರ್ದಿಷ್ಟ ಹಣವನ್ನು ಕೊಟ್ಟು ಪಡೆಯುವುದು. ಅಲ್ಲಿ ತರಬೇತಿಯನ್ನು ಕೂಡ ಪಡೆಯಬಹುದು.



3 15"*20" ಪಾಲಿಥಿನ್ ಚೀಲವನ್ನು ಪಡೆದು ಅದರ ತಳಭಾಗದ ಸೆಂಟರ್ ನಲ್ಲಿ ಒಂದು ಗಂಟ್ ಅನ್ನು ಹಾಕುವುದು. ಅದರ ಒಳಗೆ 3" ದಪ್ಪದ ಬತ್ತದ ಹುಲ್ಲು ಅನ್ನು ವೃತ್ತಾಕಾರವಾಗಿ ತುಂಬುವುದು. ಅದರ ಮೇಲೆ ಸುತ್ತಲೂ ಅಣಬೆ ಬೀಜಗಳನ್ನು ಹಾಕುವುದು.ಮತ್ತೆ 3" ಬತ್ತದ ಹುಲ್ಲು ಅನ್ನು ಹಾಕುವುದು ಒತ್ತುವುದು. ಹೀಗೆ ಮೂರು ಪದರಗಳಲ್ಲಿ ಬೀಜಗಳನ್ನು ಹಾಕುವುದು. ಚೀಲವನ್ನು ಕಟ್ಟುವುದು. 17ರಿಂದ 19 ರಂಧ್ರವನ್ನು ಮಾಡುವುದು. ತಾಪವು 20'ಸಿ-28'ಸಿ ಇರಬೇಕು. ಬಿತ್ತಿದ 20 ದಿನ ಆಸುಪಾಸಿನಲ್ಲಿ ಫಿನಟ್ ಬರುವುದು. ಆಗ ನೀರನ್ನು ಸ್ಪ್ರೆ ಮಾಡುವುದು.



4 ಮಾರನೇ ದಿನ ಒಂದು ಕಟಾವು ಬರುವುದು. ಪ್ರುಟಿಂಗ್ 25ದಿನ, 35ದಿನ ಮತ್ತು 45 ದಿನ ಆಸುಪಾಸಿನಲ್ಲಿ ಬರುವುದು.

5



ಕಟಾವನ್ನು ಆಂಟಿ ಕ್ಲಾಕ್ ವೈಸ್ ನಲ್ಲಿ ಟ್ವಿಸ್ಟ್ ಮಾಡುವುದು ಮತ್ತು ತೆಗೆಯುವುದು. ಬೆಳೆದ ಅಣಬೆಯನ್ನು ಸ್ವಂತ ಬಳಗಿಸುವುದು ಅಥವಾ ಮಾರ್ಕೆಟ್ ಮಾಡುವುದು.



ನಟರಾಜ್ ಎನ್
ಬೆಂಗಳೂರು

Image source: Multiple websites

# ನಾನೇಕೆ ಹೀಗಾದೆ?

ಅವಳ ಪರಿಚಯ ನನಗಾಗಿದ್ದು, ಕೆಲವು ವರ್ಷಗಳ ಹಿಂದೆ. ಈ ಪರಿಚಯ, ಇಂದು ಗಾಢವಾಗಿ ಬೆಳೆದು. ಅವಳನ್ನು ಮರೆಯಲು ಆಗುತ್ತಿಲ್ಲ. ನನಗೆ ಮದುವೆಯಾಗಿ ಪತ್ನಿ ಇದ್ದರೂ, ಅವಳ ಸನಿಹ ಬೇಕೆನಿಸುತ್ತದೆ.

ಪತ್ನಿಗೆ ಇದೆಲ್ಲಾ ಗೊತ್ತಿದ್ದರೂ, ಒಮ್ಮೊಮ್ಮೆ ಬೈದು ಬಿಡುತ್ತಿದ್ದಳು - ಅವಳನ್ನು ಜಾಸ್ತಿ ಹಚ್ಚಿಕೊಳ್ಳಬೇಡ್ರಿ ಎಂದು.

ಪತ್ನಿಯ ಮಾತು ನನ್ನ ಕಿವಿಯೊಳಗೆ ಹೋಗಲೇ ಇಲ್ಲ. ತಿಂಗಳಿಗೋ ಇಲ್ಲ ಮೂರು ತಿಂಗಳಿಗೋ ಒಂದಿಷ್ಟು ಹಣ ಕೊಟ್ಟು ಅವಳು ನನ್ನ ಜೊತೆ ಲವಲವಿಕೆಯಿಂದ ಇರುವಂತೆ ಮಾಡಿಕೊಳ್ಳುತ್ತಿದ್ದೆ.

ಪತ್ನಿ ತವರಿಗೆ ಹೋದಾಗ, ಆಫೀಸು ಬಿಡುವಿರುವಾಗ, ಒಂಟಿಯಾದಾಗ, ಕರೆಂಟು ಹೋದಾಗ ಅವಳ ಜೊತೆ ಹೆಚ್ಚು ಹೊತ್ತು ಇರಲು ಸುಖವೆನಿಸುತ್ತಿತ್ತು. ಪತ್ನಿ ಕೊಡುವ ಸುಖಕ್ಕಿಂತ ಅವಳ ಸೌಂದರ್ಯದ ಮೈ ತಿಕ್ಕುವಿಕೆಯ ರೋಮಾಂಚನ ಹಿತವಾಗಿ ಕಂಡಿತ್ತು.

ಒಂದು ದಿನ ನಾನು ಅವಳ ಕೈ ಹಿಡಿದು, ದೇವಸ್ಥಾನದ ಹೊಳೆಯಲ್ಲಿ ಮೀಯುತ್ತಿರುವಾಗ, ನನ್ನ ಕೈ ಜಾರಿ ನದಿಯಲ್ಲಿ ಮುಳುಗಿ ಏಳುತ್ತಾ ತೇಲಿಹೋದಳು. ಆ ದೃಶ್ಯವನ್ನು ಕಂಡ ನನ್ನ ಹೃದಯ ಒಡೆದುಹೋಯ್ತು.

ಹೇಗೋ ಅವಳನ್ನು ಹಿಡಿದು ದಡಕ್ಕೆ ತಂದು ಪ್ರಥಮ ಚಿಕಿತ್ಸೆ ನೀಡಿ, ಆಸ್ಪತ್ರೆಗೆ ದಾಖಲು ಮಾಡಿದೆ.

ದೇಹದ ನರನಾಡಿಯಲ್ಲಿ ಹೆಚ್ಚಿನ ನೀರು ತುಂಬಿ ಹೋಗಿತ್ತು. ಇದರಿಂದ ಮೆದುಳು ನಿಷ್ಕ್ರಿಯವಾಗಿ, ಆಸ್ಪತ್ರೆಯ ಐ.ಸಿ.ಯೂ ನಲ್ಲಿ ಜೀವನ್ಮರಣದ ಹೋರಾಟ ನಡೆಸಿ, ಕೊನೆಗೂ ನನ್ನ ಬಿಟ್ಟು ಹೊರಟೇ ಹೋದಳು.

ಅವಳಿಲ್ಲದೆ ನನಗೆ ಬದುಕಲು ಸಾಧ್ಯವಿಲ್ಲ. ಅವಳ ನೆನಪಲ್ಲಿ ಮೂರ್ನಾಲ್ಕು ದಿನ ಕಳೆದೆ.

ಕೊನೆಗೆ ಒಂದು ನಿರ್ಧಾರಕ್ಕೆ ಬಂದೆ - ಅವಳ ಬಗ್ಗೆ ಕೊರಗುವುದು ಸರಿಯಲ್ಲವೆಂದು. ನನ್ನ ಬಾಳಿಗೆ ಇನ್ನೊಬ್ಬಳನ್ನು ಕರೆತಂದೆ!



AI generated image: No photo credits required

ನಾನು ಇಲ್ಲಿಯವರೆಗೆ ಬರೆದ ಸಂಕ್ಷಿಪ್ತ ಕಥೆ ಯಾರ ಬಗ್ಗೆಯೂ ಅಲ್ಲ. ನೀವು ಕೈಯಲ್ಲಿ ಹಿಡಿದು ಓದುತ್ತಿರುವ ಮೊಬೈಲ್ ಬಗ್ಗೆ!



**ಜಗದೀಶರಾಂ ಶೆಟ್ಟಿಗಾರ್ ಜಪ್ತಿ**
**ಕುಂದಾಪುರ**

# ಗುಣಿತಾಕ್ಷರ **ನ** – ಕವನ

**ನ**ಗಪ ರಾಜನ ಪುತ್ರಿ
**ನಾ**ಗಾಭರಣನ ಮಡದಿ
**ನಿ**ಜಜನನಿ ಸ್ತುತಿಪೆ
**ನೀ**ಡು ವರವಾ ತಾಯೆ
**ನು**ಡಿಕಾರ ನಾನಾಗೆ
**ನೂ**ರ್ಮಡಿಸಿ ಪ್ರಖ್ಯಾತಿ
**ನೃ**ಪೇಂದ್ರನೇ ಗೌರವಿಸಿ
**ನೆ**ತ್ತಿಯ ನೇವರಿಸಿ

**ನೇ**ವಾಳವ ನೀಡಿ
**ನೈ**ಪುಣ್ಯವಾ ಹರಸುವಂತೆ
**ನೊ**ಚ್ಚಿದನು ನಾನು
**ನೋ**ವಿರಲಿ ನಲಿವಿರಲಿ ಜೀವನದ
**ನೌ**ಕೆ ಸಾಗಲಿ ಅಭ್ಯುತ್ಥಾನ
**ನಂ**ಬಿಹೆನು ತಾಯೆ ಉದ್ಧರಿಸು
**ನಃ** ಅನವರತವು



**ಡಾ. ಶಿವಪ್ರಸಾದ್ ಕೆ.**
**ಉಡುಪಿ**

# ಶೆಟ್ಟಿಗಾರ ವಾಣಿ

## ಸಮಾಜ ಬಾಂಧವರ ಅವಗಾಹನೆಗಾಗಿ

- ಸಮಾಜದಲ್ಲಿರುವ ಸಾಹಿತ್ಯ ರಂಗದ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶ ಹೊಂದಿರುವ **ಶೆಟ್ಟಿಗಾರ ವಾಣಿ** ತನ್ನ ಪ್ರಕಟಣೆಯನ್ನು ಪ್ರಾರಂಭಿಸಿ ಪ್ರಗತಿ ಪಥದಲ್ಲಿದ್ದು ಸಮಾಜ ಬಾಂಧವರ ಮೆಚ್ಚುಗೆಗೆ ಪಾತ್ರವಾಗಿದೆ.

- ಸಮಾಜ ಬಾಂಧವರು ಬರೆದಿರುವ ಕಥೆ, ಕವನ, ಪ್ರಬಂಧ, ಪ್ರವಾಸ ಕಥನಗಳು, ವೈಚಾರಿಕ ಲೇಖನಗಳು, ವೃತ್ತಿ ಮತ್ತು ಜೀವನ ಅನುಭವ ಗಾಥೆಗಳು, ನಗೆ ಬರಹಗಳು, ವ್ಯಂಗ್ಯ ಮತ್ತು ರೇಖಾಚಿತ್ರಗಳು ಮೊದಲಾದ ವಿಭಿನ್ನ ಸಾಹಿತ್ಯ ಕೃತಿಗಳನ್ನು ಸ್ವೀಕರಿಸಲಾಗುವುದು.

- ಆಯ್ಕೆಯಾದ ಬರಹಗಳನ್ನು ಪತ್ರಿಕೆಯ ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.

- ಬರಹಗಳ ಆಯ್ಕೆ ಮತ್ತು ಪ್ರಕಟಣೆಯ ವಿಷಯದಲ್ಲಿ ಪತ್ರಿಕೆಯ ತೀರ್ಮಾನವೇ ಅಂತಿಮವಾಗಿರುತ್ತದೆ.

- ಲೇಖಕರು ತಮ್ಮ ಹೆಸರು, ವಿಳಾಸ, ಭಾವಚಿತ್ರ ಮತ್ತು ಕಿರು ಪರಿಚಯವನ್ನು ಲೇಖನದೊಂದಿಗೆ ನಮೂದಿಸಬೇಕು.

- ಪತ್ರಿಕೆಯ ಸರ್ವಾಂಗೀಣ ಪ್ರಗತಿಗೆ ಸಲಹೆ ಸೂಚನೆಗಳನ್ನು ಸಾದರದಿಂದ ಸ್ವೀಕರಿಸಲಾಗುವುದು.

ಆಸಕ್ತರು ತಮ್ಮ ಬರಹಗಳನ್ನು (WORD FILE) ಇಮೇಲ್ ಮೂಲಕ ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿಸಲಾಗಿದೆ (ಹೆಚ್ಚಿನ ಮಾಹಿತಿ, ವಿವರ ಮತ್ತು ನಿಮ್ಮ ಅನಿಸಿಕೆಗಳಿಗೆ ಸಂಪರ್ಕಿಸಿ):

**shettigaravani@gmail.com**
**ವಾಟ್ಸಪ್ ನಂ. 9845660131**

ಪತ್ರಿಕೆಯ ಓದುಗರು ತಮ್ಮ ಅನಿಸಿಕೆ ಮತ್ತು ಸಲಹೆಗಳನ್ನು ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಿಕೆ:

**shettigaravani@gmail.com**
**Mob. No. 9845660131**